Indian Journal Of History and Archaeology

INDIAN JOURNAL OF HISTORY AND ARCHAEOLOGY

ISSN (e):2582-225X
Vol-3, Issue -1, May-June, 2021, Page No,72-86
Peer Reviewed Journal, Referred Journal

IJHA JOURNALS www.IJHA.IN

# ಗುಂಡ್ಲುಪೇಟೆ ತಾಲೋಕು ಪ್ರದೇಶದ ಶಾಸನ ಉಲ್ಲೇಖಿತ ಧಾರ್ಮಿಕ ಸ್ಥಿತಿಗತಿಗಳು ಒಂದು ಅವಲೋಕನ

ನಟರಾಜನ್.ಹೆಚ್.ಜಿ.[1]

ಪ್ರಾಚೀನ ಕಾಲದಿಂದಲೂ ಕರ್ನಾಟಕವು ಸರ್ವಧರ್ಮ ಸಮನ್ವಯ ನೆಲೆಯಾಗಿದ್ದು, ಹಲವು ಧರ್ಮಗಳನ್ನು ತನ್ನ ಮಡಿಲಲ್ಲಿ ಸಾಕುತ್ತಾ ಬಂದಿದೆ. ಭೌಗೋಳಿಕವಾಗಿ ಸಮೃದ್ಧವಾಗಿರುವ ಕರ್ನಾಟಕ ಎಲ್ಲಾ ಧರ್ಮವನ್ನು ಪೋಷಿಸಿದೆ. ಕ್ರಿ.ಪೂ. 4 ಮತ್ತು 5ನೇ ಶತಮಾನದಲ್ಲಿ ಮೌರ್ಯ ಸಾಮ್ರಾಜ್ಯ ಸಂಸ್ಥಾಪಕ ಚಂದ್ರಗುಪ್ತನು ಜೈನ ಗುರು ಬದ್ರಬಾಹುವಿನೊಡನೆ ಶ್ರವಣಬೆಳಗೊಳಕ್ಕೆ ಬಂದು ಸಲ್ಲೇಖನ ವ್ರತ ಮಾಡಿ ಮರಣಹೊಂದಿದನು. ಇಲ್ಲಿಂದ ಜೈನ ಮತ್ತು ಭೌದ್ಧ ಧರ್ಮಗಳು ಪರಿಚಯಿಸಲ್ಪಟ್ಟವು. ಶ್ರವಣಬೆಳಗೊಳಕ್ಕೆ ಬಂದ ಚಂದ್ರಗುಪ್ತನು ಅಶೋಕನ ಮೊಮ್ಮಗ ಸಂಪ್ರತಿ ಚಂದ್ರಗುಪ್ತನೆಂದು ಮೌರ್ಯ ವಂಶದ ಸಂಸ್ಥಾಪಕ ಚಂದ್ರಗುಪ್ತನಲ್ಲವೆಂದು ಹೇಳಲಾಗಿದೆ. ನಂತರ ಅರಸು ಮನೆತನಗಳು ಈ ಧರ್ಮಗಳನ್ನು ಪೋಷಿಸಿದವು.

ಧರ್ಮವು ಸಮಾಜದ ಒಂದು ಅವಿಭಾಜ್ಯ ಅಂಗವಾಗಿದೆ. ಧರ್ಮಕ್ಕೆ ಸಮಾಜದಲ್ಲಿ ತನ್ನದೇ ಆದ ಐತಿಹಾಸಿಕ ಪರಂಪರೆಯಿದೆ. ಕನ್ನಡ ನಾಡಿನಲ್ಲಿ ಪ್ರಚಲಿತವಾಗಿದ್ದಷ್ಟು ಧರ್ಮಗಳು ವಿಶ್ವದ ಯಾವ ಭಾಗದಲ್ಲೂ ಇರಲಿಲ್ಲ. ಕನ್ನಡ ನಾಡಿನ ರಾಜಮಹಾರಾಜರುಗಳು ಅಪಾರ ಪ್ರೋತ್ಸಾಹ ನೀಡಿ ಧಾರ್ಮಿಕ ಆಚರಣೆಗಳನ್ನು ಬೆಳೆಸಿದ್ದಾರೆ. ಕನ್ನಡಿಗರ ವಿಶಾಲವಾದ ಧಾರ್ಮಿಕ ಮನೋಭಾವದ ಕಾರಣದಿಂದಲೇ ಹಲವಾರು ಧರ್ಮಗಳು ಹೊರಗಿನಿಂದ ಬಂದು ಆಶ್ರಯ ಪಡೆದುಕೊಂಡು ತಮ್ಮ ಸಂಸ್ಕೃತಿಯನ್ನು ಉಳಿಸಿವೆ, ಬೆಳೆಸಿವೆ. ಈ ಕಾರ್ಯಕ್ಕೆ ರಾಜರುಗಳು, ಪ್ರಜೆಗಳು ತುಂಬು ಮನದಿಂದ ಸಹಾಯ ಸಹಕಾರಗಳನ್ನು ನೀಡಿರುವ ಅಂಶಗಳನ್ನು ಶಾಸನಗಳು ಸಾರುತ್ತ ನಿಂತಿವೆ. ಕನ್ನಡ ನಾಡಿನ ಜನರಲ್ಲಿ ಹಾಸುಹೊಕ್ಕಾಗಿರುವ ಧಾರ್ಮಿಕ ಸಂಸ್ಕೃತಿ, ಜೈನ, ಬೌದ್ಧ, ಶೈವ, ವೀರಶೈವ, ವೈಷ್ಣವ ಧರ್ಮಗಳಲ್ಲದೇ ಇಸ್ಲಾಂ, ಕ್ರಿಶ್ಚಿಯನ್ ಧರ್ಮಗಳೂ ಈ ನೆಲದಲ್ಲಿ ಬದುಕಿವೆ. ಪ್ರಾಚೀನ ಕಾಲದಲ್ಲಿ ರಾಜರುಗಳು ತಾವು ಯಾವ ಧರ್ಮವನ್ನೇ ಪರಿಪಾಲಿಸುತ್ತಿದ್ದರೂ ಕೂಡ ಅನ್ಯಧರ್ಮಗಳಿಗೆ ಉದಾರವಾದ ಕೊಡುಗೆಯನ್ನು, ದಾನದತ್ತಿ ನೀಡಿ ಪ್ರೋತ್ಸಾಹಿಸಿದ್ದಾರೆ. ಈ ಕಾರ್ಯಕ್ಕೆ ರಾಜಮಹಾರಾಜರು ಮತ್ತು ಸಾಮಾನ್ಯ ಪ್ರಜಾ

1. ಸಂಶೋಧಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಕ.ರಾ.ಮು.ವಿ, ಮುಕ್ತ ಗಂಗೋತ್ರಿ ಮೈಸೂರು

ವರ್ಗದವರು, ತುಂಬುಮನದಿಂದ ಸಹಾಯ ಸಹಕಾರಗಳನ್ನು ನೀಡಿರುವ ಅಂಶಗಳನ್ನು ಶಾಸನಗಳು ಸಾರುತ್ತಿವೆ. ಗುಂಡ್ಲುಪೇಟೆ ಪ್ರದೇಶದಲ್ಲಿ ಜೈನ, ಶೈವ ಧರ್ಮ, ವೈಷ್ಣವ ಧರ್ಮಗಳು ಪ್ರಾಚೀನ ಕಾಲದಲ್ಲಿ ರಾಜಾಶ್ರಯವನ್ನು ಪಡೆದಿರುವುದು ಶಾಸನಗಳಿಂದ ವಿಧಿತವಾಗುತ್ತದೆ.

**ಶೈವ ಧರ್ಮ**:

ಪ್ರಾಚೀನ ಧರ್ಮಗಳಲ್ಲಿ ಶೈವಧರ್ಮವು ಒಂದಾಗಿದ್ದು, ಈ ಧರ್ಮದ ಇತಿಹಾಸವು ವೇದಗಳಿಗಿಂತಲೂ ಹಿಂದಿನದಾಗಿದೆ. ಹರಪ್ಪ, ಮಹೆಂಜೋದಾರೋ, ಸನ್ನತಿಯಲ್ಲಿರುವ ಕೊಂಬುಗಳಿರುವ ದೇವತೆಯ ಚಿತ್ರವಿರುವ ಮುದ್ರೆಗಳು, ಲಿಂಗಗಳು ದೊರೆತಿದೆ. ಕೊಂಬುಗಳಿರುವ ದೇವತೆಗೆ ಮೂರು ಮುಖಗಳಿವೆ. ಅದು ಯೋಗ ಸಮಾಧಿಯ ಭಂಗಿಯಲ್ಲಿ ಕುಳಿತಿದ್ದು ಅದರ ಸುತ್ತಲು ಆನೆ, ಹುಲಿ, ಖಡ್ಗಮೃಗ, ಎಮ್ಮೆ ಸುತ್ತುವರಿದಿದೆ. ಇದನ್ನು ಅವಲೋಕಿಸಿದಾಗ ಶೈವ ಧರ್ಮದ ಮಹಾಯೋಗಿಯು ಪಶುಪತಿಯಾದ ಶಿವನ ಪ್ರಾಚೀನ ರೂಪ ಎಂದು ನಿರ್ಧರಿಸಬಹುದು. ಶೈವ ಧರ್ಮವು ಬಹು ಪ್ರಾಚೀನವಾದ ಧರ್ಮ. ಅದರ ಇತಿಹಾಸವು ವೇದಗಳ ಕಾಲಕ್ಕಿಂತಲೂ ಹಿಂದಕ್ಕೆ ಹೋಗುತ್ತದೆಂದು ವಿದ್ವಾಂಸರ ಅಭಿಪ್ರಾಯ. ಸಿಂದೂ ನಾಗರೀಕತೆಯ ನಿವೇಶನಗಳ ಉತ್ಖನನದಲ್ಲಿ ದೊರೆತಿರುವ ಅವಶೇಷಗಳಲ್ಲಿ ಕೆಲವು ವಿಶಿಷ್ಟ ಮುದ್ರೆಗಳು ಉಲ್ಲೇಖನೀಯ. ಅವುಗಳಲ್ಲಿ ಅತೀ ಪ್ರಸಿದ್ಧವಾದುದೆಂದರೆ 'ಪಶುಪತಿ' ಮುದ್ರೆ. ಈ ಮುದ್ರೆಯಲ್ಲಿ ಚಿಕ್ಕ ಮೇಜಿನ ಮೇಲೆ ಊರ್ಧ್ವಲಿಂಗಿಯಾಗಿ ಯೋಗಿಯಂತೆ ಕುಳಿತಿರುವ ಮೈತುಂಬ ಆಭರಣ ಧರಿಸಿದ ದೇವತೆಯಿದ್ದು ತಲೆಯ ಮೇಲೆ ತ್ರಿಶೂಲದಂತೆ ಕಾಣುವ ಕೊಂಬಿನ ಕಿರೀಟವಿದೆ. ದೇವತೆಯ ಸುತ್ತಲೂ ಹುಲಿ, ಆನೆ, ಖಡ್ಗಮೃಗ ಮತ್ತು ಕೋಣ ಚಿತ್ರಗಳಿದ್ದು ಬಹುಶಃ ಮನುಷ್ಯನ ಚಿತ್ರವೂ ಇದೆ. ಮೇಲೆ ಮತ್ತು ಕೆಳಗಡೆ ಜಿಂಕೆಗಳನ್ನು ಚಿತ್ರಿಸಿದೆ. ಪಶುಗಳಿಂದ ಸುತ್ತುವರಿಯಲ್ಪಟ್ಟಿರುವುದರಿಂದ ಇವನನ್ನು ಪಶುಪತಿ ಎಂದು ಗುರುತಿಸುವ ಪ್ರಯತ್ನವಾಗಿದೆ. ನಂತರದಲ್ಲಿ ಸಾಹಿತ್ಯಿಕ ಪುರಾವೆಗಳ ಪ್ರಕಾರ ಪಶುಪತಿ ಎಂಬುದು ಶಿವನ ಒಂದು ಹೆಸರು ಎಂಬುದು ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಈ ಧರ್ಮಕ್ಕೆ ಸಂಬಂಧಿಸಿದಂತೆ ಗುಂಡ್ಲುಪೇಟೆ ತಾಲೂಕಿನಲ್ಲಿ ದೊರೆತಿರುವ ಶಾಸನಗಳಿಂದ ತಿಳಿಯಬಹುದು.

ಕ್ರಿ.ಶ. 10ನೇ ಶತಮಾನದ ಹಳ್ಳದ ಮಾದಹಳ್ಳಿ ಶಾಸನವು ಯರು ಗಾವುಂಡನ ಮಗ ಕೇತ ಗಾವುಂಡನು ಮಾತನ್ನ ದೇವಜ್ಜಿಯ ಮೆಚ್ಚಿ ಬೆಂದವಾಡಿಯ ಸೋಮೇಶ್ವರ ಬರಿಸ್ತಾರೆ, ಶಿವ ಸ್ಥಾನಕ್ಕೆ ಭೂಮಿಯನ್ನು ದಾನ ನೀಡಿದ ಉಲ್ಲೇಖವಿದೆ. ಕ್ರಿ.ಶ. 1029ರ ಹಸಗೂಲಿ ಶಾಸನವು ಕುರನಾಡ ಪುಸಗುಲಿ ಗ್ರಾಮವನ್ನು ಮತ್ತು ಭೂಮಿಯನ್ನು ದಾನಕೊಟ್ಟ ವಿಷಯವಿದೆ. ಕಾಡಮಾರ ಗಾವುಂಡನ ಮಗ ಆದನ ಗಾವುಂಡಂಗೆ ಕೆಲ್ಲಸೂರ ವಲ್ಲಕೆಗಾವುಂಡನು, ತುಪ್ಪೂರು ಕುನ್ನಗಾವುಂಡನು, ಕಂದಮಂಗಲದ ಎಳವಂಗ ಗಾವುಂಡನು, ಅಿನ್ನಿಸೂಗೆ ಯರವಂಗ ಗಾವುಂಡನು, ಕಲ್ಲೂರ ಬೀಚಗಾವುಂಡನು, ಅದೇವಳ ಭೂತಯ್ಯನು, ನಿದ್ರೆಯ ಚಾವುಂಡಯ್ಯನು ಇವರೊಡಗೂಡಿ

ಶಾಸನವನ್ನು ಹೆಗ್ಗಡೆ ಭಾಷಯ್ಯನು ಬರೆದ ಉಲ್ಲೇಖವಿದೆ. ಕ್ರಿ.ಶ. 1048ರ ತೊಂಡವಾಡಿ ಶಾಸನವು ವಿಜಯನಗರ ರೇವಣ್ಣಾರಾಧ್ಯ ಸ್ವಾಮಿಯವರ ಪುತ್ರರು, ಶಿವಲಿಂಗಸ್ವಾಮಿಯವರು ದಕ್ಷಿಣ ಯಾತ್ರೆ ಕೈಗೊಂಡಾಗ ಶ್ರೀರಂಗಪಟ್ಟಣದಲ್ಲಿ ಹರಿಹರ ಮಹಾರಾಯರವರು ಶಿವಲಿಂಗಸ್ವಾಮಿಯವರ ದರ್ಶನ ಮಾಡಿಕೊಂಡಲ್ಲ ಎಂದು ಹರಿಹರ ಮಹಾರಾಯರವರು ಭಿನ್ನಹ ಮಾಡಿಕೊಂಡು ಶಿವಲಿಂಗಸ್ವಾಮಿಯವರ ಶಿಷ್ಯ ವರ್ಗದ ಸಹಿತ ವಿವರವಾದ ಉಲ್ಲೇಖವಿದೆ. ಕ್ರಿ.ಶ. 1049ರ ಇದೇ ರಾಜನ ಚಿಕ್ಕಾಟಿ ಶಾಸನದಲ್ಲಿ ತೊಱುಕಾರಾಟ್ಟಿಯ ಆಚಯ್ಯನ ಮಗ ಕೇಶವಭಟ್ಟನು ತನ್ನ ಮಾತಾಪಿತ್ರುಗಳಿಗೆ ಮಹದೇವ ದೇಗುಲ ಮಾಡಿಸಿ ದೀಪಾರಾಧನೆಗೋಸ್ಕರ ನೊಱುಭತ್ತದ ಮೂಟೆಗಳು ಮತ್ತು 6 ಹಸುಗಳನ್ನು ದೇವರಿಗೆ ದಾನ ನೀಡಿದ್ದಾನೆ. ಹಾಗೆಯೇ ಚಂದ್ರಶೇಖರ ದೇವರ ಮುಂದೆ ದೀಪಾರಾಧನೆಗೋಸ್ಕರ ಕೇಶವಭಟ್ಟನಿಂದ ಖರೀದಿಸಿ ಬಿಯಳ ಬಿಯಳಬ್ಬೆರಾಚಮ್ಮನ ಮಗ ಮಾಕಯ್ಯನಿಂದ 100 ಭತ್ತ ಮತ್ತು ಹಸುಗಳನ್ನು ದಾನ ನೀಡಿದ ವಿವರವಿದೆ.

ಕ್ರಿ.ಶ. 1157ರ ಗೋಪಾಲಪುರ ಶಾಸನವು ಮಹಾ ಪಸಾಯಿತನಾದ ವಾಮನ ಮಲ್ಲಣ್ಣ ಕೊಂಗಿಗೆ ದಾಳಯಿಟ್ಟ ಸಂಗತಿಯನ್ನು ನಿರೂಡಿಸುತ್ತದೆ. ಇಂಗುಳವಾಡಿಯ ಮಲ್ಲಣ್ಣ ಬೋವನ ಮಗ ರಣಮಂಚಿಗೆ ಎಂಬುವವನು ಸರದಿ ಹೋರಾಟದಲ್ಲಿ ಇಂತಕ್ಕೆ ಒಳಗಾಗಿ ಸತ್ತನು. ಅವನ ಪರೋಕ್ಷ ವಿನಿಯವಾಗಿ ಕುಡುಗುನಾಡ ಮಹಾಪ್ರಭು ಜೋಳ ಚಾವುಂಡನ ಮಗ ಮರತಮ್ಮ ಸತ್ತ ವೀರನ ಮಕ್ಕಳಗಾಗಿ ಭೂಮಿಯನ್ನು ದಾನವಾಗಿ ನೀಡಿರುವ ವಿವರವಿದೆ. ಕ್ರಿ.ಶ. 1171ರ ಬೆಳಚಲವಾಡಿಯ ಶಾಸನವು ಶ್ರೀ ಮಹಾ ಪ್ರಧಾನ ಸರ್ವಾಧಿಕಾರಿ ಹೆಗ್ಗವಡೆ ಕಲ್ಲಯ್ಯನು ನರಸಿಂಹನ ಕಾಲದಲ್ಲಿ ಕುಮಾರ ಬೀಡಿನ ಶೀತಳವಾರಿಯ ಶ್ರೀ ರಾಮನಾಥ ದೇವಾಲಯಕ್ಕೆ ಬೆಳಚಲವಾಡಿಯನ್ನು ದಾನ ಬಿಟ್ಟ ವಿಷಯವನ್ನು ತಿಳಸುತ್ತದೆ.

ಕ್ರಿ.ಶ. 1221ರ ಕಲ್ಲಹಳ್ಳಯ ಶಾಸನದ ಶ್ರೀ ದಣ್ಣಾಯಕನು ಕೂಡುಗುನಾಡ ಶ್ರೀವಿಜಯ ನಾರಾಯಣದೇವತ ನಿತ್ಯ ಸಮಾರಾಧನೆಗೆ ದತ್ತಿಯನ್ನು ಬಿಟ್ಟಿದ್ದಾಗಿ ಶಾಸನವು ತಿಳಸುತ್ತದೆ. ಕ್ರಿ.ಶ. 1367ರಲ್ಲಿ ಕುಮಾರ ಕಂಪಣ್ಣ ಎಂಬುವವನು ರಾಮೇಶ್ವರ ದೇವಸ್ಥಾನವನ್ನು ಕಟ್ಟಿಸಿದ ಉಲ್ಲೇಖವಿದೆ. ಈ ದೇವಾಲಯವು ಪ್ರಾಚೀನವಾಗಿದ್ದು, ಇದು ಆತನ ಕಾಲದಲ್ಲಿ ಗ್ರಾಮದ ದೈವವಾಗಿದ್ದಿತ್ತು. ಕ್ರಿ.ಶ. 1372ರ ಗುಂಡ್ಲುಪೇಟೆ ಶಾಸನದಲ್ಲಿ ಕೇತವ್ವೆ ಎನ್ನುವ ನೃತ್ಯಗಾತಿಯನ್ನು ನೃತ್ಯ ಸೇವೆಗೆ ಬಿಟ್ಟಿರುವುದು ಹಾಗೂ ಆಕೆಯ ಜೀವಿತಕ್ಕಾಗಿ ತೆರಕಣಾಂಬಿಯ ವೀರ ಪಾಂಚಾಲಕರು ದತ್ತಿಯನ್ನು ಬಿಟ್ಟ ವಿಷಯವನ್ನು ಶಾಸನವು ಉಲ್ಲೇಖಿಸುತ್ತದೆ. ಕ್ರಿ.ಶ. 1374ರ ಶಾಸನದಲ್ಲಿ ಚಿಕ್ಕ ಕಂಪಣ್ಣ ಒಡೆಯ ಆತನ ಮಗನಾದ ನಂಜನ ಒಡೆಯನು ಮಡಹಳ್ಳಯನ್ನು ರಾಮನಾಥ ಪುರವೆಂದು ಮರುನಾಮಕರಣ ಮಾಡಿ ವಿಜಯಪುರದ ರಾಮನಾಥ ದೇವರಿಗೆ ಧಾರೆ ಎರೆದಿದ್ದಾನೆ. ಕ್ರಿ.ಶ. 1504ರ ತೆರಕಣಾಂಬಿ ಶಾಸನವು ಶ್ರೀಮನ್ ಮಹಾದೇವೋತ್ಸಮ ತೆರಕಣಾಂಬಿಯ ಶ್ರೀ ಮೂಲ ಸ್ಥಾನ ದೇವರ ನೈವೇದ್ಯ

ಅಂಗರಂಗಭೋಗ ರಥೋತ್ಸವ ಮೊದಲಾದ ಸೇವೆಗೆಮಹಾರಜ್ಯಾಧಿಪತಿ ಶ್ರೀ ವೀರುಮ್ಮತ್ತೂರ ನಂಜರಾಜ ಒಡೆಯರು ಧರ್ಮವಾಗಿ ಕೊಟ್ಟ ವಿಷಯವನ್ನು ಉಲ್ಲೇಖಿಸುತ್ತದೆ. ಜೊತೆಗೆ ಮೂಲಸ್ಥಾನ ದೇವರ ತೇರ ಕಾಣಿಕೆಗೆ ದೇವದೇಯ ಬ್ರಹ್ಮದೇಯ ಗ್ರಾಮಗಳು ಸೇರಿದ್ದವು ಎಂಬ ಅಂಶವು ತಿಳಿಯುತ್ತದೆ. ಕ್ರಿ.ಶ. 1507ರ ರಾಘವಾಪುರ ಶಾಸನದಲ್ಲಿ ಶ್ರೀ ನಂಜುಂಡೇಶ್ವರ ದೇವರ ಅಮೃತಪಡಿ ಗೋಸ್ಕರ ರಾಘವಾಪುರ ಹೊಂಪುರ ಗ್ರಾಮಗಳ ಆದಾಯದಿಂದ ಅನೇಕ ತೆರಿಗೆಗಳಾದ ಸುಂಕ, ವೊಳವಾಋ, ಕಂಮಾಋದೆಋ, ಕುಂಬಾರದೆಋ, ಗಣವಾರಿಕೆ, ಕವಲಿ, ಭೋಗಾಋಕೆ, ಮಾದಋಕೆ ಮುಂತಾದ ತೆರಿಗೆಗಳಿಂದ ಹಾಗೂ ತೋಟ ಮತ್ತು ಭೂಮಿಯನ್ನು ವೀರಚಿಕ್ಕರಾಯವೊಡೆಯರು ಸಮರ್ಪಿಸಿದ ದಾಖಲೆಯಿದೆ. ಕ್ರಿ.ಶ. 1543ರ ಶಾಸನದಲ್ಲಿ ಆದಿತ್ಯ ಅರಸನ ಮಕ್ಕಳು ರುಪ್ಪರಸ ಒಡೆಯನು ವಿಜಯ ನಾರಾಯಣ ದೇವಸ್ಥಾನದ ಗಾಳಿ ಮಂಟಪವನ್ನು ಕಟ್ಟಿಸಿ ಉದಯ ಕಾಲದ ಸಾನಿಧ್ಯಕ್ಕೆ ದತ್ತಿಯನ್ನು ನೀಡಿದ್ದಾರೆ. ಹೀಗೆ ಶೈವ ಧರ್ಮವು ತನ್ನದೇ ಆದ ಮಹತ್ವವನ್ನು ಗಳಿಸಿಕೊಂಡಿರುವುದು ಮೇಲೆ ತಿಳಿಸಿದ ಅಂಶಗಳಿಂದ ವೇದ್ಯವಾಗುತ್ತದೆ. ನಂತರ ಈ ಧರ್ಮವು ಕಾಲ ಕ್ರಮದಲ್ಲಿ ವೀರ ಧರ್ಮದಿಂದ ಪ್ರಭಾವಿತವಾಯಿತು.

**ವೀರಶೈವ ಧರ್ಮ**:

ದಕ್ಷಿಣ ಕರ್ನಾಟಕದಲ್ಲಿ ವೀರಶೈವ ಧರ್ಮದ ಜನಪ್ರಿಯತೆ ಮಂದಗತಿಯಲ್ಲಿದ್ದು ಕಲ್ಯಾಣದಿಂದಾಗಿ ಉತ್ತರ ಕರ್ನಾಟಕದಲ್ಲಿ ಅದು ಹೆಚ್ಚು ಜನಪ್ರಿಯವಾಗಿದ್ದು ಜಂಗಮ ಮತ್ತು ಮಠಗಳಿಂದ ಅದು ಕಾಲಾನಂತರದಲ್ಲಿ ಹೆಚ್ಚು ಪ್ರಾಧಾನ್ಯತೆಯನ್ನು ಪಡೆದುಕೊಂಡಿತು. ವೀರಶೈವ ಧರ್ಮವು ರಾಜಮಹಾರಾಜರ ಕೃಪಾನುಗ್ರಹಗಳನ್ನು ಹುಡುಕಿಕೊಂಡು ಹೋಗಲಿಲ್ಲ. ಆದರೆ ಮೈಸೂರಿನ ಒಡೆಯರು, ಕಳಲೆ ದಳವಾಯಿಗಳು, ಆದಿನಾಡು ಅರಸರು ಮತ್ತು ಇತರರು ಅದಕ್ಕೆ ಸಾಕಷ್ಟು ಪೋಷಣೆ ನೀಡಿದರು. ಈ ಹಿನ್ನೆಲೆಯಲ್ಲಿ ವೀರಶೈವ ಧರ್ಮವು ಗುಂಡ್ಲುಪೇಟೆ ತಾಲೂಕಿನಲ್ಲಿ ಪ್ರಚಲಿತದಲ್ಲಿತ್ತು ಎಂಬುದನ್ನು ಹಲವಾರು ಶಾಸನಗಳು ಪ್ರಚಾರಪಡಿಸುತ್ತದೆ. ಕ್ರಿ.ಶ. 1318ರ ಬೊಮ್ಮಲಾಪುರ ಶಾಸನದಲ್ಲಿ ರಾಮಯದೇವರಿಗೆ ಮತ್ತು ಮೂಲಸ್ತಾನ ದೇವರಿಗೆ ಹಾಗೂ ಗ್ರಾಮದೇವತೆ ಹಯಿರಗುಪ್ಪೆ ಕೆಂಪಣ್ಣನು ಕೆಲವು ನಿಗದಿ ಪಡಿಸಿದ ಭೂಮಿಯನ್ನು ದಾನ ನೀಡಿದ ವಿವರವಿದೆ ಕ್ರಿ.ಶ. 1334ರ ಕಂದಗಾಲ ಶಾಸನದಲ್ಲಿ ಸೋಮನಾಥ ದೇವರ ನಂದಾದೀವಿಗೆಗೆ ಗಾಣ 1ಕ್ಕೆ ಸೊಲ್ಲಿಗೆ ಎಣ್ಣೆಗೋಸ್ಕರ ಕಂದವಂಗಲದ ಬಮ್ಮಗೌಡನ ಮಕ್ಕಳು ರಾಮಗೌಡ, ರಾಯಗೌಡ, ಕೇತಗೌಡ, ಕಋಗೌಡನವರು ಅಪ್ಪನಿಗೆ ಧರ್ಮವಾಗಲೆಂದು ದಾನ ನೀಡಿದ ವಿವರವಿದೆ. ಕ್ರಿ.ಶ. 1372ರ ಗುಂಡ್ಲುಪೇಟೆ ಶಾಸನದಲ್ಲಿ ರಾಮನಾಥ ದೇವರ ಪಾತ್ತಭೋಗ ಸೇವೆಗೋಸ್ಕರ ಪಸನ್ನ ಅಗ್ರಹಾರ ಮಹಾಜನಗಳಿಂದ 30 ಗದ್ಯಾಣಗಳನ್ನು ದಾನವಾಗಿ ನೀಡಿದ ವಿವರವಿದೆ.ಕ್ರಿ.ಶ. 1407ರ ಹರಿಹರದ ತ್ರಿಯಂಬಕಪುರ ತಾಮ್ರಶಾಸನದಲ್ಲಿ ಸಂಗಮ, ಹರಿಹರ, ಬುಕ್ಕ ವಂಶಾವಳಿಯನ್ನು ತಿಳಿಸುತ್ತದೆ. ಹರಿಹರನು ತ್ರಿಯಂಬಕದದೇವರಿಗೆ ಹಲವು

ನಿಗದಿಪಡಿಸಿದ ಭೂಮಿ ದಾನ ನೀಡಿದ್ದಾನೆ. ತೆರಕಣಾಂಬಿ ಸ್ಥಳದ ತ್ರಿಯಂಬಕಪುರದ ತ್ರಿಯಂಬಕದೇವ ಗುರುಮೂರ್ತಿ ದೇವರಿಗೆ ಭೂಮಿಯನ್ನು ಎಲೆ ಅಡಿಕೆಗಳಿಂದ ಭೂಮಿ ದಾನ ನೀಡಿದ ತಾಮ್ರ ಶಾಸನವಾಗಿದೆ. ಕ್ರಿ.ಶ. 1413ರ ಕೃಷ್ಣದೇವರಾಯನ ತ್ರಿಯಂಬಕಪುರ ಶಾಸನದಲ್ಲಿ ರಾಚಿರಾಜನ ಮಗ ಸಾಳುವ ಗೋವಿಂದರಾಜನು ಕೃಷ್ಣದೇವರಾಯನಿಗೆ ಪುಣ್ಯವಾಗಬೇಕೆಂದು ತೆರಕಣಾಂಬಿಯ ಸೀಮೆಯ ಒಳಗೆ ತ್ರಿಯಂಬಕಪುರ ದೇವರ ಕರ್ಪೂರ ವೀಳೆಗೋಸ್ಕರ ಅನೇಕ ತೆರಿಗೆಗಳಿಂದ ದಾನ ನೀಡಿದ ವಿವರವಿದೆ. ಕ್ರಿ.ಶ. 1422ರ ಮೂರನೇ ಹರಿಹರನ ಸೋಮನಹಳ್ಳಿ ಶಾಸನದಲ್ಲಿ ಶ್ರೀವಿರಪ್ರತಾಪದೇವರಾಯ ಮಹಾರಾಯರಕುಮಾರ ಶ್ರೀಮನ್ಮಹಾಮಂಡಲೇಶ್ವರ ಶ್ರೀ ವೀರಹರಿಹರರಾಯರು ತಂದು ತಂದೆ ದೇವರಾಯಮಹಾರಾಯಂಗೆ ಶಾಶ್ವತವಾಗಿ ಪುಣ್ಯಲೋಕ ಪ್ರೀತರ್ಥವಾಗಿ ತೆರಕಣಾಂಬಿ ರಾಜ್ಯಕ್ಕೆ ಸಲ್ಲುವ ಕುಲಗಣಸ್ಥಳದ ಬಾಗೆಸೋಮನಹಳ್ಳಿಯೆಂಬ ಗ್ರಾಮವನ್ನು 12 ವೃತ್ತಿ ಭೂಮಿಯನ್ನು ನಂಜುಂಡೇಶ್ವರ ದೇವರಿಗೆ ದಾನ ನೀಡಿದ ತಾಮ್ರ ಶಾಸನವಾಗಿದೆ.

ಕ್ರಿ.ಶ. 1430ರ ಚನ್ನಮಲ್ಲಪುರ ಶಾಸನದಲ್ಲಿ ಉಮ್ಮತ್ತೂರಿನ ಮಹಾಮಂಡಳೇಶ್ವರ ವೀರ ಸೋಮವೂಡೆಯರ ಮಗ ಚಿಕ್ಕಣ್ಣ ಒಡೆಯರು ತೆರಕಣಾಂಬಿ ರಾಜ್ಯವನ್ನು ಆಳುತ್ತಿದ್ದು ದೂರದ ನಂಜನಗೂಡು ನಂಜುಂಡೇಶ್ವರ ದೇವರಿಗೆ ಕೂಡುಗು ನಾಡಿನ ಆಲತ್ತೂರಿನ ಗ್ರಾಮವನ್ನು ದತ್ತಿ ಬಿಟ್ಟ ವಿಚಾರವಿದೆ. ಕ್ರಿ.ಶ. 1446ರ ಮಸಹಳ್ಳಿ ಶಾಸನದಲ್ಲಿ ಶ್ರೀಮತ್ ಸದಾಶಿವರಾಯ ಮಹಾಕಾರ್ಯ ಅನುಗೇಯಿಂರಾಮರಾಜ ಮಹಾ ಅರಸರುಗಳ ನಿರೂಪದಿಂದ ರುಸ್ತುಂ ಬಿಕಾವುವೊಡೆಯರು ಕೂಡತಿಯ ಹೊಂನ ಅಲಗೆ ವೊಡೆಯರಿಗೆ ಕೊಟ್ಟ ಗ್ರಾಮಾನುಕ್ರಮದ ಪ್ರವೆಂತದೆ ನಮಃ ವಿಜಯಪುರಕ್ಕೆ ಸಲ್ಲುವ ಮಸಹಳ್ಳಿ ಗ್ರಾಮ ಕಾಲುಹಳ್ಳಿ ಮರಝು ವೊಳೆವೊರ್‍ರಂ ಕೆಂಗಳುಪುರ, ಈ ಮೂರು ನಿವಗೆ ಸುತ್ತಿ ಸುತ್ತಿಕೆಯಾಗಿ ಕಲುಪಟಿಯಾಗಿ ಕೋಟೆವಾಗಿ ಎಂದು ಉಲ್ಲೇಖಿಸುತ್ತದೆ. ಕ್ರಿ.ಶ. 1448ರ ಮಲ್ಲಿಕಾರ್ಜುನ ಕಾಲದ ತ್ರಿಯಂಬಕಪುರ ಶಾಸನದಲ್ಲಿ ಸಿರಿಗಿರಿ ಮಲ್ಲಿಕಾರ್ಜುನದೇವರಿಗೆ ರಾಜನು ಕಾಡಸೂರು ಗ್ರಾಮವನ್ನು ಪ್ರೌಢದೇವರಾಪುರ ಎಂದು ಪ್ರತಿನಾಮ ಮಾಡಿದ ದಾಖಲೆಯಿದೆ.

ಕ್ರಿ.ಶ. 1469ರ ಶಿವಪುರದ ಶಾಸನದಲ್ಲಿ ಉಮ್ಮತ್ತೂರಿನ ದೊರೆ ಶ್ರೀ ಮನ್ ಮಹಾಮಂಡಳೇಶ್ವರ, ಶ್ರೀ ವೀರಗಜಬೇಂಟೆಕಾರ ಸೋಮರಾಯ ಒಡೆಯರ ಕುಮಾರ ದೇವರಾಜ ಒಡೆಯರು ಸುಜನನ ಸುದ್ದಶಿವಚಾರ ಸಂಪನ್ನರು ತನ್ನ ಗುರುಗಳು ಆದ ಶ್ರೀರುದ್ರಾಕ್ಷಿ ಒಡೆಯರಿಗೆ ಕೂಡುಗನಾಡ ತೆರಕಣಾಂಬಿ ಸ್ಥಳದ ಗೊಂದಿಗನಹಳ್ಳಿಯೊಂದನ್ನು ದಾನ ಪೂರ್ವಕವಾಗಿ ಬಿಟ್ಟ ಸಂಗತಿ ಇದೆ. ಕ್ರಿ.ಶ. 1476ರ ಸೋಮಹಳ್ಳಿಯ ಶಾಸನದಲ್ಲಿ ಶ್ರೀ ವೀರ ಇಮ್ಮಡಿರಾಯ ಒಡೆಯರ ಮಕ್ಕಳು ದೇವಣ್ಣ ಒಡೆಯರವರ ನಂಜರಾಜ ಒಡೆಯರ ಮಕ್ಕಳು ಪ್ರದಾನ ಆಲಪ್ಪ ಶೆಟ್ಟಿಯವರ ಮಕ್ಕಳು ದೇವರಾಯನ

ಧರ್ಮದಲ್ಲಿ ನಂಜನಗೂಡಿನ ನಂಜುಂಡೇಶ್ವರ ದೇವಾಲಯದ ಸಮೀಪದಲ್ಲಿ ನೆಲೆಸಿದ ವೀರ ಭದ್ರದೇವರ ಕಲ್ಲು ಮಂಟಪದಲ್ಲಿ ನಿವಾಸಿ ಮಠದ ಧರ್ಮಕ್ಕೆ ನಡೆದು ಬಾಹ ಮಹತ್ತಿನ ಆರೋಗಿಯ ಸಹದಾನಂ ಮಾಡಿಕೊಟ್ಟ ಎಂದಿರುವುದರಿಂದ ನಿವಾಸಿ ಮಠದ ದತ್ತಿ ಬಿಟ್ಟ ಮತ್ತು ವೀರ ಭದ್ರ ದೇವರ ಪ್ರಸ್ತಾಪವನ್ನು ಈ ಶಾಸನ ಸೂಚಿಸುತ್ತದೆ. ಕ್ರಿ.ಶ. 1482ರ ನಂಜರಾಜವೊಡೆಯನ ಉಮ್ಮತ್ತೂರು ಮುಖ್ಯಸ್ಥರ ಕಾಲದ ಚಿಕ್ಕಣಾಪುರ ಗ್ರಾಮದ ಶಾಸನದಲ್ಲಿ ತೆರಕಣಾಂಬಿಯ ಅಂಗಡಿಯ ವೀರಭದ್ರ ದೇವರ ಪ್ರತಿನಿತ್ಯ ಪೂಜೆ ನೈವೇದ್ಯಕ್ಕೋಸ್ಕರ ತೆರಕಣಾಂಬಿಯ ನಾಡ ಕಾಚಗೌಂಡನ ಮಾದಹಳ್ಳಿಯ ಕಾಲುವಳಿಯ ಚಿಕ್ಕಣನಹಳ್ಳಿಯ ಗ್ರಾಮವನ್ನು ಉಂಬಳಿಯಾಗಿ ದಾನ ನೀಡಿದ ವಿವರವಿದೆ. ಕ್ರಿ.ಶ. 1483ರ ಶೆಟ್ಟಿಹಳ್ಳಿಯ ಶಾಸನದಲ್ಲಿ ತೆರಕಣಾಂಬಿಯ ಪಟ್ಟಣದ ಆಗ್ನೇಯ ಭಾಗದಲ್ಲಿರುವ ಸೋಮಯ್ಯ ದೇವರ ಅಂಗರಂಗ ಭೋಗ ಅಮೃತಪಡಿಗೆ ಕೇತೆದಣ್ಣಾಯಕರ ಧರ್ಮದಲ್ಲಿ ಸಲ್ಲುವುದು ಎಂದು ಹಾಗೂ ಶೆಟ್ಟಿಹಳ್ಳಿ ಗ್ರಾಮವನ್ನು ಉಮ್ಮತ್ತೂರ ದೊರೆ ವೀರಹನುಮ ಒಡೆಯರ ಮಗ ಇಮ್ಮಡಿ ರಾಯಕುಮಾರ ದೇವಣ್ಣಾಡೆಯರಿಗೆ ಗ್ರಾಮವನ್ನು ದಾನ ನೀಡಿದ ವಿಷಯ ತಿಳಿಸುತ್ತದೆ.

ಕ್ರಿ.ಶ. 1492ರ ತ್ರಿಯಂಬಕಪುರ ಶಾಸನದಲ್ಲಿ ತ್ರಿಯಂಬಕದೇವರ ಅಮೃತಪಡಿ, ಸರ್ವಸಾಮಾನ್ಯವಾಗಿ ಬೊಂನಹಳ್ಳಿ, ಹುಸಪುರವನ್ನು ಕಟ್ಟಿ ಕೆಱ್ಯನ್ನು ಕಟ್ಟಿ ಆ ಕೆಱ್ ಕೆಳಗೆ ಅಡಕೆ ಮರವನ್ನು ಯಿಕ್ಕಿ-ಗದ್ಯಾಣ 12, ಗುತ್ತಿಗೆಯಾಗಿ ಮಾಡಿಕೊಂಡು, 12 ಹೊಂನನ ತ್ರಿಯಂಬಕದೇವರ ಭಂಡಾರಕೆ ವರುಷಂ ಪ್ರತಿ ಸಲ್ಲಿಸಿ ರಾಜಪುರದ ಒಡೆಯರುಗಳು ದಾನ ನೀಡಿದ್ದಾರೆ. ಕ್ರಿ.ಶ. 1492-93ರ ಬೊಮ್ಮನಹಳ್ಳಿ ಶಾಸನದಲ್ಲಿ ಶಾಸನ ಸವೆದಿದೆ. ಪರ್ವತದೇವನು ತ್ರಿಯಂಬಕದೇವ ದೇವರಿಗೆ ಭೂಮಿ ದಾನ ನೀಡಿದ ದಾಖಲೆಯಿದೆ. ಕ್ರಿ.ಶ. 1497ರ ಕರಕಲಮಾದಹಳ್ಳಿ ಶಾಸನದಲ್ಲಿ ಉಮ್ಮತ್ತೂರು ಮುಖ್ಯಸ್ಥರ ಕುಟುಂಬದ ದೇವರಾದ ಶಿವನಸಮುದ್ರದಲ್ಲಿರುವ ಸೋಮೇಶ್ವರ ದೇವರ ಮುಂದೆ ಮಾದಿಹಳ್ಳಿ ಗ್ರಾಮವನ್ನು ಚನ್ನನಂಜರಾಯಪುರವನ್ನು ಪುನರ್ ನಾಮಕರಣ ಮಾಡಿ ಗ್ರಾಮವನ್ನು ವೀರನಂಜರಾಯ ವೊಡೆಯರ ಮಗ ಚನ್ನನಂಜರಾಜವೊಡೆಯ ದಾನ ನೀಡಿದ ವಿವರವಿದೆ. ಕ್ರಿ.ಶ. 1504ರ ತೆರಕಣಾಂಬಿಯ ಶಾಸನದಲ್ಲಿ ತೆರಕಣಾಂಬಿಯ ಶ್ರೀ ಮೂಲಸ್ಥಾನ ದೇವರ ನಯಿವೈದ್ಯ, ಅಂಗರಂಗಭೋಗ, ರಥೋತ್ಸವ ಮೊದಲಾದ ಸೇವೆಗೋಸ್ಕರ ವೀರ ಉಂಮತೂರು ನಂಜರಾಯವೊಡೇರು ತೆರೆಕಾಣಿಕೆ ತೆರಿಗೆಗಳ ಆದಾಯದಿಂದ ದಾನ ನೀಡಿದ್ದಾರೆ. ಕ್ರಿ.ಶ. 1515ರ ಬಾಗಳಿ ಶಾಸನದಲ್ಲಿ ಬಾಗಳಿ ಭುಜಂಗೇಶ್ವರ ದೇವರಿಗೆ ಮತ್ತೂರಾ ಸ್ಥಳದ ಬಾಗಳಿ ಗ್ರಾಮವನ್ನು ಸರ್ವಸಾಮಾನ್ಯವಾಗಿ ಗೋವಿಂದರಾಜ ಅಯ್ಯನು ದಾನ ನೀಡಿದ ವಿವರವಿದೆ. ಕ್ರಿ.ಶ. 1521ರ ಕೋಡಿಹಳ್ಳಿ ಶಾಸನದಲ್ಲಿ ರಾಜನ ಅಭಿವೃದ್ಧಿಗೋಸ್ಕರ ತುಂಗಾಭದ್ರಾನದಿಯ ದಂಡೆಯ ಮೇಲೆ ವಿರುಪಾಕ್ಷದೇವರ ಮುಂದೆ ಮಕರಸಂಕ್ರಾಂತಿ ಸಂದರ್ಭದಲ್ಲಿ ತ್ರಿಯಂಬಕದೇವರ ಪೂಜೆ,

ನೈವೇದ್ಯಗೋಸ್ಕರ ಅಂಗರಂಗಭೋಗಕ್ಕೆ ರಾಚಿರಾಜನ ಮಗ ಸಾಳುವ ಗೋವಿಂದರಾಜನು ದಾನ ನೀಡಿದ ದಾಖಲೆಯಿದೆ.

ಕ್ರಿ.ಶ. 1521ರ ತ್ರಿಯಂಬಕಪುರ ಶಾಸನದಲ್ಲಿ ತ್ರಿಯಂಬಕೇಶ್ವರ ದೇವರಿಗೆ ಅನೇಕ ಗ್ರಾಮಗಳು ತೆರಿಗೆಗಳ ಆದಾಯದಿಂದ ರಾಜನು ದಾನ ನೀಡಿದ ವಿವರವಿದೆ. ಇದೇ ಕಾಲದ ಇದೇ ಊರಿನ ಮತ್ತೊಂದು ಶಾಸನ ಅಂಗರಂಗವೈಭವ ನಡೆಯಬೇಕೆಂದು ಶ್ರೀಕೃಷ್ಣ ಮಹಾರಾಯರ ನಿರೂಪದಿಂದ ತೆರಕಣಾಂಬಿ ಸ್ಥಳದ ಕೋಡಿಹಳ್ಳಿಯಿಂದ ಎರಡು ಸ್ಥಳಗಳಾದ ಅಂಣಿಯೂರು, ಚನ್ನಯ್ಯಪುರದಿಂದ 77 ಗದ್ಯಾಣಗಳನ್ನು ತೆರಿಗೆಗಳ ರೂಪದಿಂದ ತೆರಿಗೆಗಳಾದ ಬೆಟ್ಟದಕಾವಲು, ಬೋಗಾಱದೆಱ್, ಗಣಕಾರತೆಱ್ಗೆ, ಆಹಳದೆಱ್ಗೆ ಆದಾಯದಿಂದ ರಾಚಿರಾಜನ ಮಗ ಸಾಳುವ ಗೋವಿಂದರಾಜನು ದಾನ ನೀಡಿದ ದಾಖಲೆಯಿದೆ. ಕ್ರಿ.ಶ. 1535ರ ತ್ರಿಯಂಬಕಪುರ ಶಾಸನವು ತ್ರಿಯಂಬಕದೇವರ ದೇವಾಲಯದ ಸ್ಥಾನಿಕವಾದ ನಂಜಿನಾಥ ಜೋಯಿಸಿನ ಮಗ ಅಯ್ಯಪ್ಪನು ಕಮಲಾಪುರ ಅಗ್ರಹಾರವೆಂಬ ಪ್ರತಿನಾಮವನ್ನು ಪಡೆದಿದ್ದ ಹುಲ್ಲಾಣಗ್ರಾಮದಲ್ಲಿದ್ದ ತನ್ನ ಭೂಮಿಯನ್ನು ಮಾರಿದನು ಜೊತೆಗೆ ಮಾರಿದ ಭೂಮಿಯಲ್ಲಿ ತಾನು ಸರ್ವಸಾಮಾನ್ಯವಾಗಿ ಪಡೆದತೋಟ ಚಿಕ್ಕಪ್ಪ ಹಾಗೂ ಗೋಪಣ್ಣರಿಂದ ಕೊಂಡಿದ್ದ ಭೂಮಿಯೂ ಸೇರಿದ್ದಿತು. ದೇವಾಲಯದ ಅಧಿಕಾರಿಯೂ ಆದ ಬಾಸವಯ್ಯನು ಗುರುಮೂರ್ತಿ ತ್ರಿಯಂಬಕ ದೇವರ ದೇವಾಲಯಕ್ಕಾಗಿ ಈ ಭೂಮಿಯನ್ನು ಕೊಂಡನು. ಎಂಬುದನ್ನು ಉಲ್ಲೇಖಿಸುತ್ತದೆ.

ಕ್ರಿ.ಶ. 1548ರ ವಿಜಯನಗರದ ದೊರೆ ಸದಾಶಿವರಾಯನ ಕರ್ಯಕರ್ತ ಸೂರಪ್ಪ ಆರಿಚೇನಿಯು ತಾನು ಪಡೆದಿದ್ದ ತೆರಕಣಾಂಬಿ ಸ್ಥಳದ ಕೋಲೆಕಿಶಿ ಗ್ರಾಮವನ್ನು ಅದರ ಕಾಲುವಳ ರಾಮಪುರವನ್ನು ಗುತ್ತಿಗೆಯಾಗಿ ಮಾದಿಹಳ್ಳಿ ಬೋಲನಂಜಯ್ಯ ದೇವರಿಗೆ ಕೊಟ್ಟಿದ್ದಾನೆ. ಕ್ರಿ.ಶ. 1546ರ ಹಸುಗೂಲಿ ಶಾಸನದಲ್ಲಿ ಶ್ರೀ ನಂಜುಂಡೇಶ್ವರ ದೇವರ ಅಮೃತಪಡಿಗೆ ಉಂಮತೂರವಡೆಯರು ತೆರಕಣಾಂಬಿಯ ಸೀಮೆಯಲ್ಲಿ ಹಸುಗೂಲಿ ಗ್ರಾಮವನ್ನು ಬಿಟ್ಟ ವಿವರವಿದೆ.

ಕ್ರಿ.ಶ. 1551ರ ಸದಾಶಿವಮಹಾರಾಯನ ಒಡ್ಡಗೆರೆ ಶಾಸನದಲ್ಲಿ ಮೂಲಸ್ತಾನ ಲಿಂಗದೇವರ ಅಂಗರಂಗವೈಭೋಗಕ್ಕೆ ರಾಮರಾಜಯನವರ ತಂದೆ ಗೋಪರಾಜೈಯನವರಿಗೆ ಪುಂಣ್ಯ ವಾಗಬೇಕೆಂದು ಒಡಗೆರೆ ಗ್ರಾಮವನ್ನು ದಾನ ನೀಡಿದ ದಾಖಲೆಯಿದೆ. ಕ್ರಿ.ಶ. 1558ರ ಅವೂತುಗೊಂಡಹಳ್ಳಿ ಶಾಸನದಲ್ಲಿ ಸದಾಶಿವರಾಯನ ಅಧಿಕಾರಿ ತೂಸ್ಯಂ ಕಾನಪೂಡೆಯ ನಿರೂಪದಿಂದ ನಾಗರಸರು ಮೃತ್ಯಂಜಯವೂಡೆಯರಿಗೆ ಅವಳತನಗೊಂಡನಹಳ್ಳಿ ಗ್ರಾಮವನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ. 1567ರ ಕಮರಹಳ್ಳಿ ಶಾಸನದಲ್ಲಿ ಶ್ರೀಮನ್ ಮಹಾಬಸವೇಶ್ವರ ದೇವರಿಗೆ ಕೂರಿಗಹಳ್ಳಿಯ ಜೊಂಜವೊಡೆಯ ಶಿಷ್ಯ ಕರಿಬಸವೊಡೆಯರ ಲಿಂಗದೇವ ಒಡೆಯರು ದತ್ತಿ ಬಿಟ್ಟಿರುವ

ಪ್ರಸ್ತಾಪವಿದೆ. ಕ್ರಿ.ಶ. 15ನೇ ಶತಮಾನದ ಗುಂಡ್ಲುಪೇಟೆಯ ಶಾಸನದಲ್ಲಿ ಶ್ರೀರಾಮನಾಥ ದೀಪಕ್ಕೆ ತೆರಕಣಾಂಬಿಯ ಮಹತ್ತು ತನ್ನ ಮಠದ ದೀಪಿಗೆ ಸ್ವಾವ್ಯವನ್ನು ದತ್ತಿ ಬಿಟ್ಟ ವಿಚಾರವನ್ನು ಉಲ್ಲೇಖಿಸುತ್ತದೆ. ಹೀಗೆ ಗುಂಡ್ಲುಪೇಟೆ ತಾಲೂಕಿನ ಶಾಸನಗಳಲ್ಲಿ ಉಲ್ಲೇಖವಾದಂತೆ ವೀರಶೈವ ಧರ್ಮವು (1540) ಅಸ್ತಿತ್ವದಲ್ಲಿದ್ದು ಸುಮಾರು 600 ವರ್ಷಗಳಿಗೂ ಮೀರಿದ ಇತಿಹಾಸವನ್ನು ಹೊಂದಿದೆ.

ಕ್ರಿ.ಶ. 16ನೇ ಶತಮಾನದ ಗುಂಡ್ಲುಪೇಟೆ ಶಾಸನದಲ್ಲಿ ರಾಮೆಯದೇವರ ಒಂದು ಹೊತ್ತಿನ ನಯಿವೆದ್ಯಕ್ಕೆ ವಿಶ್ವನಾಥವೊಡೆಯರಿಂದ 18 ಹೊನ್ನು ಕ್ರಯವಾಗಿ ಕೊಂಡು ಯಡತಲೆ ಚಿಕ್ಕನಂಜಯ ಅರಸರು ಭೂಮಿಯನ್ನು ದಾನ ನೀಡಿದ ದಾಖಲೆಯಿದೆ. ಇದೇ ಕಾಲದ ಇದೇ ಊರಿನ ಮತ್ತೊಂದು ಶಾಸನ ವಿಜಯಪುರದ ಅನಂತದೇವರಿಗೋಸ್ಕರ ಬೌರ ಮತ್ತು ಬಾನರವಾಡಿಯ ಗ್ರಾಮದಲ್ಲಿ ಭೂಮಿ, ತೋಟ, ಮನೆ, ನಿವೇಶನವನ್ನು ಬೈಚಣ್ಣ ಮತ್ತು ಕಾಮೆಯನಾಯಕ ದಾನ ನೀಡಿದ ದಾಖಲೆಯಿದೆ. ಇದೇ ಕಾಲದ ಪಂಚನಹಳ್ಳಿ ಶಾಸನದಲ್ಲಿ ಪಂಜನಹಳ್ಳಿಯ ಸಿದೆಗುಡನ ಮಕ್ಕಳು ಪುಟ್ಟದೇವಗುಡನ ಶ್ರೀ ಬಸವೇಶ್ವರ ದೇವರಿಗೆ ಅರಕೆಱೆಯ ಮಲ್ಲಪ್ಪನಾಯಕರ ಕುಮಾರಪೆರಮನಾಯ್ಕಅಯ್ಯನವರು ತಮಗೆ ಪುಣ್ಯವಾಗಬೇಕೆಂದು ಕೊಟ್ಟ ಕೊಡುಗೆ. ಇದೇ ಕಾಲದ ಪಡುಗೂರು ಶಾಸನದಲ್ಲಿ ಪಡುವರೂರ ಉರಮುಂದಣ ಹನುಮಂತದೇವರ ಸೇವೆಗೋಸ್ಕರ ಮತ್ತು ಸಾಳುವ ಗೋವಿಂದ ರಾಜಯ್ಯನಿಗೆ ಧರ್ಮವಾಗಲೆಂದು ಬೋವರಾಉತ ಮಂಗರಾಉತರ ಬಸವರಾಉತ ಯಲ್ಲರಾಉತ ದೇವರಾಯರಾಉತ ಅಂಣಮಯ್ಯರಾಉತ ಬಯಿರರಾಉತ-ಯಿ ಆರು ಮಂದಿ ರಾಉತರು ಸಂಪಿಗೆಪುರ ಮತ್ತು ಬಿಗುತಕೆಱೆಯ 430 ಭೂಮಿಯನ್ನು ದಾನ ನೀಡಿದ ದಾಖಲೆಯಿದೆ.

**ವೈಷ್ಣವ:**

ಹಿಂದೂ ಧರ್ಮದಲ್ಲಿ ಶಿವನಷ್ಟೆ ಪ್ರಬಲನಾದ ದೇವನಾಗಿರುವ ವಿಷ್ಣುವಿಗೂ ಒಂದು ಸುದೀರ್ಘ ಇತಿಹಾಸವಿದೆ. ಈತ ವೇದಗಳಲ್ಲಿ ಪ್ರಧಾನ ದೇವನಲ್ಲದಿದ್ದರು ಆ ಪ್ರಧಾನವೇನು ಅಲ್ಲ. ಅವನು ತನ್ನ ಮೂರು ಹೆಜ್ಜೆಗಳಿಂದ ಲೋಕದ ಸಮಸ್ತವನ್ನು ಅಲೆದುದನ್ನು ಋಗ್ವೇದದಲ್ಲಿ ವರ್ಣಿಸಲಾಗಿದೆ. ಆತನ ಎರಡು ಹೆಜ್ಜೆಗಳನ್ನು ಮರ್ತ್ಯರು ಕಾಣಬಹುದು. 3ನೇಯದನ್ನು ಮಾತ್ರ ಯಾರು ಕಾಣಲಾರರು, ಏಕೆಂದರೇ ಅದು ಪಕ್ಷಿಗಳ ಸಂಚಾರ ಪಥವಣ ಮೀರಿದೆ. ಜ್ಞಾನಿಗಳು ವಿಷ್ಣುವಿನ ಅತ್ಯುನ್ನತ ಲೋಕವನ್ನು ಕಾಣಬಲ್ಲದು ವಿಷ್ಣುವಿನ ಆ ಲೋಕದಲ್ಲಿ ಒಂದು ಜೇನಿನ ಬಾವಿ ಇದ್ದು. ಅಲ್ಲಿ ದೇವತೆಗಳೆಲ್ಲರು ರಮಿಸುತ್ತಿದ್ದರು. ಬ್ರಹ್ಮಣಕಗಳ ಕಾಲದಲ್ಲಿ ವಿಷ್ಣುವಿನ ಪ್ರಾಮುಖ್ಯವು ಹೇಳಿದಂತೆ ದೇವತೆಗಳಲ್ಲೆಲ್ಲ ಈತನೆ ವರಿಷ್ಟನೆಂದು ಆಗ್ನಿಯೇ ಕನಿಷ್ಟ ದೇವತೆ ಎಂದು ಐತ್ತೇರಿಯ ಬ್ರಾಹ್ಮಣವು ಬಣ್ಣಿಸಿದೆ. ಅನಂತರ ಇತಿಹಾಸ ಮಹಾಕಾವ್ಯಗಳ ಕಾಲದಲ್ಲಿ ವಿಷ್ಣುವು ಪರಮ ದೇವನಾಗಿ ವಿಜೃಂಭಿಸಿದರು. ಭಾರತದ ಪ್ರಾಚೀನ

ಧರ್ಮಗಳಲ್ಲಿ ಶೈವ ಧರ್ಮದಂತೆ ವೈಷ್ಣವ ಧರ್ಮವು ಒಂದು. ವಿಷ್ಣು ಋಗ್ವೇದದಲ್ಲಿ ಆಗಲೇ ಉಲ್ಲೇಖಿತ ದೇವತೆ. ವೈಷ್ಣವ ಧರ್ಮವು ಒಂದು ಭಕ್ತಿಪ್ರಧಾನ ಧರ್ಮವಾಗಿ ಬೆಳೆಯಿತು. ವೈಷ್ಣವ ಧರ್ಮದ ಆರಾಧ್ಯ ದೇವರು ವಿಷ್ಣು, ವಿಷ್ಣುವನ್ನು ಅನೇಕ ರೂಪಗಳಲ್ಲಿ ಪೂಜಿಸಲಾಗುತ್ತದೆ. ವೇದಗಳಲ್ಲಿ ವಿಷ್ಣುವಿನ ವರ್ಣನೆಯ ತುಂಬ ಸ್ವಾರಸ್ಯಕರವಾಗಿದೆ. ರಾಮಾಯಣದಲ್ಲಿ ರಾಮ, ಮಹಾಭಾರತದಲ್ಲಿ ಕೃಷ್ಣ ಅವತಾರ ಪುರುಷನಾಗಿದ್ದಾನೆ. ಮಹಾಭಾರತದಲ್ಲಿ ವಿಷ್ಣು ಸರ್ವಶಕ್ತ ನೈತಿಕ ಸದ್ಗುಣ, ಆಚಾರ, ಪರಿಶುದ್ಧ ದೈವವೆಂದು ವರ್ಣಿಸಲ್ಪಟ್ಟಿದ್ದಾನೆ. ಪ್ರಾಚೀನ ರಾಜಮನೆತನಗಳು ಈ ಧರ್ಮಕ್ಕೆ ಸಾಕಷ್ಟು ರಾಜಾಶ್ರಯ ನೀಡಿ ಪೋಷಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಗುಂಡ್ಲುಪೇಟೆ ತಾಲೂಕಿನ ಶಾಸನಗಳಲ್ಲಿ ದೊರೆತಿರುವ ಮಾಹಿತಿಯನ್ನು ಕೆಳಕಂಡಂತೆ ತಿಳಿಯಬಹುದು. ಅವುಗಳಲ್ಲಿ 1171ರಲ್ಲಿ ಶ್ರೀಮಾನ್ ಮಹಾಪ್ರಧಾನ ಸರ್ವಾಧಿಕಾರಿ ಕಲ್ಲಯ್ಯನ ಸನ್ನಿಧಾನದಲ್ಲಿ ಕುಮಾರಬೀಡಿನ ಶೀತಲವಾರಿಯ ಶ್ರೀರಾಮನಾಥ ಮತ್ತು ಮೂಲಸ್ಥಾನ ದೇವರಿಗೆ ಪದಿನಾಡಿಗ ಬೇತಲವಾಡಿಯನ್ನು ದತ್ತಿ ನೀಡಲಾಗಿದೆ. ಕಲ್ಲಹಳ್ಳಿಯಲ್ಲಿ ಕ್ರಿ.ಶ. 1221ರಲ್ಲಿ ಶ್ರೀರಂಗದಂಡನಾಯಕ ಶ್ರೀ ವಿಜಯನಾರಾಯಣ ದೇವರ ನಿತ್ಯ ಸಮಾರಾಧನೆಗಾಗಿ ಕುಡಗು ನಾಡಿನ ಕಲು ಪಟ್ಟವನ್ನು ದತ್ತಿ ನೀಡಿದನು. ಕ್ರಿ.ಶ. 1275ರಲ್ಲಿ ಹಂಗಳದಲ್ಲಿ ತಿರುನಾರಯಣ ದೇವರಿಗೆ ಕುರಿಪಟ್ಟಿಯ ಮಾರಿಸೆಟ್ಟಿ ನೀಡಿರುವನ್ನು. ಹಂಗಳದ ಪ್ರಾಚೀನ ಹೆಸರು ಪಂಗುಳ. ಕ್ರಿ.ಶ. 1287ರಲ್ಲಿ ಹಸುಗೂಲಿಯನ್ನು ರಾಮಯ ದೇವರ ಕಾರ್ಯಕ್ಕಾಗಿ ಮಹಾರಾಜವಾಡಿಯ ಮಹಾದೇವನು ದತ್ತಿ ನೀಡಿರುವನು. ಕ್ರಿ.ಶ. 1315ರ ಕಣ್ಣಾಗಾಲ ಶಾಸನವು ಮುಮ್ಮಡಿ ಬಲ್ಲಾಳನ ಆಳ್ವಿಕೆಗೆ ಸೇರಿದ್ದು ಮಾಧವ ದಣ್ಣಾಯಕನು ಹಿಮವದ್ ಗೋಪಾಲಸ್ವಾಮಿ ಬೆಟ್ಟದ ಮೇಲೆ ಗೋಪಿನಾಥ ದೇವರನ್ನು ಪ್ರತಿಷ್ಠಾಪಿಸಿದ ಬಗ್ಗೆ ಉಲ್ಲೇಖವಿದೆ. ಕ್ರಿ.ಶ. 1320 ರಾಘವಾಪುರದ ಶಾಸನಗಳಲ್ಲಿ ಕೇತೆದಣ್ಣಾಯಕನು ಕೂಡುಗಾಡಿನ ಗೊಮ್ಮಟ ಹಳ್ಳಿ ಹಾಗೂ ಕಾಚಿಗೌಡನ ಮಾದೇಯ ಹಳ್ಳಿ ಎಂಬ ಎರಡು ಗ್ರಾಮಗಳನ್ನು ಅರಮನೆಯ ಶ್ರೀಕರ್ಣದ ರಾಘವಧೆವನ ಮಗ ನಾರಣ್ಣ ದೇವನಿಗೆ ತನ್ನ ತಂದೆಯ ಹೆಸರಿನಲ್ಲಿ ಅಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ನೀಡಿದ ವಿಚಾರವನ್ನು ತಿಳಿಸುತ್ತದೆ. ಕ್ರಿ.ಶ. 1372ರಲ್ಲೂ ಗುಂಡ್ಲುಪೇಟೆ ಶಾಸನ ವಿಜಯಪುರದ ದೇವರಿಗಾಗಿ, ದೇವರ ಪಾತ್ರಕ್ಕಾಗಿ ನಾಗವ್ವೆಯ ಮಗ ಹಿರಿಯ ರಾಮಣ್ಣ ಕೇತವ್ವೆಯನ್ನು ಧಾರಾಪೂರ್ವಕವಾಗಿ ನೀಡಿದನು ಹಾಗೂ ಕೇತವ್ವೆಯ ಜೀವಿತಕ್ಕೆ ಬಡಗಿಗಳು, ಅಕ್ಕಸಾಲಿಗರು-ಕಂಚುಗಾರರು ಪ್ರತಿವರ್ಷ ಹಣವನ್ನು ಕೊಡಬೇಕು ಎಂಬ ಮಾಹಿತಿ ಇದೆ. ದೇವರ ಸೇವೆಗಾಗಿ ಸ್ತ್ರೀಯನ್ನು ದತ್ತಿ ಬಿಟ್ಟಿರುವುದು ಇಲ್ಲಿ ಕಾಣುವುದು ಪ್ರಾಯಶಃ ದೇವದಾಸಿ ಪದ್ಧತಿಯ ಚಿತ್ರಣವಿರಬೇಕು. ಅವಳ ಜೀವಿತಕ್ಕೆ ದತ್ತಿ ನೀಡಿರುವುದು ಮಹತ್ವದ್ದಾಗಿದೆ. ಸಂಪಿಗೆಪುರ ಮತ್ತು ಬೆಳಚಲವಾಡಿಯಲ್ಲಿ ಮಹಾಜನರಿಗೆ ದತ್ತಿ ನೀಡಲಾಗಿದೆ. ಕ್ರಿ.ಶ. 1537ರ ಗೋಪಾಲಪುರ ಶಾಸನವು ಅಚ್ಯುತರಾಯ ವೀರಪ್ಪವೊಡೆಯರು ತಮ್ಮ ನಾಯಕತನಕ್ಕೆ ಇಂಗಳವಾಡಿ (ಕುಣಿಗಿಹಳ್ಳಿ ಸ್ಥಳದ) ಗ್ರಾಮವನ್ನು

ಗೋಪಾಲಸ್ವಾಮಿ ಬೆಟ್ಟದ ಗೋವರ್ಧನಗಿರಿಗೆ ದಾನಬಿಟ್ಟ ವಿಚಾರವು ಉಲ್ಲೇಖಗೊಂಡಿರುವುದನ್ನು ಕಾಣಬಹುದು. ಕ್ರಿ.ಶ. 13ನೇ ಶತಮಾನದ ಹಂಗಳದ ಶಾಸನದ ತಿರುನಾರಾಯಣ ದೇವರಿಗೆ ಸೇವೆಗಾಗಿ ದಾನ ನೀಡಿದ ಉಲ್ಲೇಖವಿದೆ. ಹಾಗೂ ಕ್ರಿ.ಶ. 1490ರ ಶಾಸನದಲ್ಲಿ ನಂಜರಾಜ ಒಡೆಯನು ತಗಡೂರಿನ ಮೂಲಸ್ಥಾನ ದೇವರ ಹಾಗೂ ಲಕ್ಷ್ಮೀಕಾಂತದೇವ ಪೂಜೆಗೋಸ್ಕರ ತಗಡೂರಿನ ಎಲ್ಲ ತೆರಿಗೆಗಳನ್ನು ಮತ್ತು ವರಮಾನಗಳನ್ನು ಧಾನವಾಗಿ ಅರ್ಪಿಸಿದರು. ಕ್ರಿ.ಶ. 1504ರ ತೆರಕಣಾಂಬಿಯ ವರದರಾಜಸ್ವಾಮಿ ದೇವಾಲಯದ ಬಳಿಯಿರುವ ಶಾಸನವು ತೇರಕಾಣಿಕೆಯ ಬಗ್ಗೆ ಉಲ್ಲೇಖಿಸುತ್ತದೆ. ತೆರಕಣಾಂಬಿ ನಾಡೊಳಗಿನ ಅಲ್ಲಾಳನಾಥ ದೇವರ (ವರದರಾಜ) ತೇರಕಾಣಿಕೆಯಾಗಿ ಪ್ರತಿವರ್ಷ 25 ಹೊನ್ನುಗಳನ್ನು ನಂಜರಾಜಯ್ಯ ವೊಡೆಯರು ನೀಡಿರುವ ಮಾಹಿತಿಯಿದೆ. ಶಾಸನೋಕ್ತವಾಗಿರುವ ತೇರಕಾಣಿಕೆಯು, ಸಂಪ್ರದಾಯದಂತೆ ಪ್ರತಿವರ್ಷ ನಡೆಯುವ ವರದರಾಜ ಸ್ವಾಮಿಯ ರಥೋತ್ಸವಕ್ಕಾಗಿಯೇ ಮೀಸಲಾದ ಕಾಣಿಕೆಯಾಗಿರಬೇಕೆನಿಸುತ್ತದೆ.

ಹೊರೆಯಾಲ ಗ್ರಾಮದ ಶ್ರೀ ರಂಗನಾಥಸ್ವಾಮಿ ದೇವಾಲಯದ ಬಳಿಯಿರುವ ಕ್ರಿ.ಶ. 1546ರ ಶಾಸನವು ದಳವಾಯಿ ಕೃಷ್ಣಪ್ಪನಾಯಕನವರು ತಗಡೂರಿನ ಚಿಕ್ಕಮಲ್ಲಯ್ಯಗೆ ಉಂಬಳ ಕೊಟ್ಟ ವಿವರವನ್ನು ನೀಡುತ್ತದೆ. ಇದರಲ್ಲಿ ವಿಜಯನಗರ ಅರಸ ಅಚ್ಯುತರಾಯನು ಉಮ್ಮತ್ತೂರು ಸೀಮೆಯ ತಗಡೂರು ಸ್ಥಳದ ಹೊರೆಯಾಲ ಗ್ರಾಮವನ್ನು ಉಂಬಳಿಯಾಗಿ ಕೊಟ್ಟು ಈ ಪ್ರದೇಶದ ಸರ್ವ ಉತ್ಪನ್ನವನ್ನು ಶಾಶ್ವತವಾಗಿ ಅನುಭವಿಸಿಕೊಂಡು ಹೋಗಲು ಅವಕಾಶ ಮಾಡಿಕೊಟ್ಟನು. ಕ್ರಿ.ಶ. 1553 ಪುರದ ಹಳ್ಳಿಯ ಶಾಸನದಲ್ಲಿ ಗೋಪಾಲಕೃಷ್ಣ ದೇವರಿಗೆ ಹುರದಹಳ್ಳಿ ಗ್ರಾಮವನ್ನು ದತ್ತಿ ಬಿಟ್ಟ ವಿಚಾರವನ್ನು ತಿಳಿಸುತ್ತದೆ. ಕ್ರಿ.ಶ. 1574ರ ಗುಂಡ್ಲುಪೇಟೆ ಶಾಸನವು ವಿಜಯಪುರದ ವಿಜಯ ನಾರಾಯಣ ದೇವಾಲಯದ ಪಾರುಪತ್ಯಗಾರನು ಅಕ್ರಮವಾಗಿ ತೆರಿಗೆಯನ್ನು ಪಡೆದ ವಿವರ ನೀಡುತ್ತದೆ. ಈತನು 20 ರೇಖೆಗಳಷ್ಟು ರಿಯಾಯ್ತಿ ಪಡೆದಿದ್ದು, ಕೊಡಗೆರೆಯನ್ನು ವಿಜಯಪುರದ ಕೆರೆಯ ಹಿಂಬದಿಯ ಭೂಮಿಯಿಂದ ಅನ್ಯಾಯವಾಗಿ ಪಡೆಯಲಾಗಿತ್ತು. ನಂತರ ಈ ವಿಷಯವನ್ನು ತಿಳಿದ ವಿಜಯಪುರ ಸೀಮೆಯ ಅಧಿಕಾರಿಯಾದ ರುಸ್ತುಂಖಾನ್ ಒಡೆಯನು ಈ ಅಕ್ರಮವನ್ನು ಸರಿಪಡಿಸಿದ. ಕ್ರಿ.ಶ.1674ರ ಶಾಸನದಲ್ಲಿ ಚಿಕ್ಕದೇವರಾಜನು ತನ್ನ ತಂದೆ ದೊಡ್ಡದೇವರಾಜ ಹಂಗಳದಲ್ಲಿ ಸತ್ತಾಗ ಅವನ ಅಂತ್ಯಕ್ರಿಯೆ ನಡೆಸಲು ಹತ್ತಿರದಲ್ಲಿ ಯಾವ ದೊಡ್ಡನದಿಯು ಇಲ್ಲದ ಕಾರಣ ಅಂತ್ಯಕ್ರಿಯೆಯನ್ನು ಗುಂಡ್ಲುಪೇಟೆ ನದಿಯ ಎಡದಂಡೆಯ ಮೇಲೆ ನಡೆಸಿ ಪರವಾಸುದೇವ ದೇವಸ್ಥಾನವನ್ನು ಕಟ್ಟಿಸಿ ಅಗ್ರಹಾರಗಳನ್ನು ರಚಿಸಿ ಬ್ರಾಹ್ಮಣರಿಗೆ ಧಾರೆ ಎರೆದ ವಿಷಯವನ್ನು ತಿಳಿಸುತ್ತದೆ. ಈ ರೀತಿಯಾಗಿ ಇಲ್ಲಿಯ ಶಾಸನಗಳು ವೈಷ್ಣವ ವ್ಯಕ್ತಿಗಳು, ಮಹಾಜನರಿಗೆ ದತ್ತಿ ನೀಡಿದ ಮಾಹಿತಿ ತಿಳಿಸಿವೆ. ಇಲ್ಲಿ ವೈಷ್ಣವ ಮಾಧವ, ವಾಸುದೇವ, ಶ್ರೀರಾಮನಾಥ, ಶ್ರೀವಿಜಯ ನಾರಾಯಣ, ತಿರುನಾರಾಯಣ, ಕಲಿರಾಮನಾಥ, ಚೋಳರಾಮನಾಥ, ಗೋಪಿನಾಥ ಮತ್ತು ನಾರಾಯಣ ಮುಂತಾದ ದೇವರುಗಳ ಹೆಸರುಗಳು

ಉಲ್ಲೇಖವಾಗಿವೆ. ಹೀಗೆ ವೈಷ್ಣವ ಧರ್ಮವು ಗುಂಡ್ಲುಪೇಟೆ ತಾಲೂಕಿನಲ್ಲಿ ತನ್ನದೇ ಆದ ಮಹತ್ವಗಳನ್ನು ಹೊಂದಿರುವುದು ಶಾಸನಗಳಿಂದ ತಿಳಿದು ಬರುತ್ತದೆ.

**ಜೈನ ಧರ್ಮ**:

ಪ್ರಾಚೀನ ಕರ್ನಾಟಕದಲ್ಲಿ ಜೈನಧರ್ಮ ಪ್ರಬಲ ಧರ್ಮವಾಗಿತ್ತು. ಜೈನಧರ್ಮದ ಪ್ರಾಚೀನತೆಯು ವೇದಗಳ ಕಾಲದಷ್ಟು ಹಿಂದಕ್ಕೆ ಹೋಗುತ್ತದೆಂದು ಜೈನರು ನಂಬುತ್ತಾರೆ. ಭಾಗವತ ಪುರಾಣದಲ್ಲಿ ಮೊದಲ ತೀರ್ಥಂಕರರ ವೃಷಭದೇವನ ಉಲ್ಲೇಖವಿದೆ. ಕ್ರಿ.ಪೂ.3ನೇ ಶತಮಾನದಲ್ಲಿ ಮೌರ್ಯವಂಶದ ಚಕ್ರವರ್ತಿ ಚಂದ್ರಗುಪ್ತ ಮೌರ್ಯನು ಹಾಗೂ ಆತನ ಗುರು ಭದ್ರಬಾಹು ಮತ್ತು ಹನ್ನೆರಡು ಸಾವಿರ ಜಿನಮುನಿಗಳು ಉತ್ತರ ಭಾರತದಿಂದ ದಕ್ಷಿಣ ಭಾರತದ ಕರ್ನಾಟಕಕ್ಕೆ ಆಗಮಿಸಿ ಪ್ರಸಿದ್ಧ ಜೈನ ಕ್ಷೇತ್ರ ಶ್ರವಣಬೆಳಗೊಳದಲ್ಲಿ ಹಲವು ಕಾಲ ನೆಲೆಸಿ ತಪಸ್ಸು ಮಾಡಿ ಜೈನವಿಧಿ ಪ್ರಕಾರ ಸಲ್ಲೇಖನ ವ್ರತ ಆಚರಿಸಿದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಅಂದಿನಿಂದ ಕರ್ನಾಟಕದಲ್ಲಿ ಜೈನಧರ್ಮವು ರಾಜಾಶ್ರಯ ಪಡೆದು ಪ್ರಬುದ್ಧಮಾನಕ್ಕೆ ಬಂದಿತು. 24ನೇ ತೀರ್ಥಂಕರನ ಮರಣಾನಂತರ ಈ ಧರ್ಮದಲ್ಲಿ ಶ್ವೇತಾಂಬರರು ಮತ್ತು ದಿಗಂಬರರು ಎಂಬ ಎರಡು ಪಂಗಡಗಳಾದವು. ಗುಂಡ್ಲುಪೇಟೆ ತಾಲೂಕಿನಲ್ಲಿ ಜೈನಧರ್ಮ ಆಚರಣೆಯಲ್ಲಿ ಇದ್ದುದರ ಕುರುಹುಗಳಾಗಿ ಈ ಪ್ರದೇಶದ ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ತಲಕಾಡು, ಗಂಗರ ರಾಜಧಾನಿ, ಗಂಗರು ಹೆಚ್ಚು ಜೈನಧರ್ಮದ ಆಶ್ರಯದಾತರು ಇವರ ಕಾಲದಲ್ಲಿ ಜೈನಧರ್ಮ ಉಚ್ಛ್ರಾಯ ಮಟ್ಟದಲ್ಲಿತ್ತು.ಈ ಧರ್ಮದ ಭವ್ಯ ಪರಂಪರೆ ಇತಿಹಾಸವನ್ನು ಹೊಂದಿರುವ ಕರ್ನಾಟಕದ ದಕ್ಷಿಣ ತುದಿಯ ಒಂದು ಜಿಲ್ಲೆಯಾದ ಚಾಮರಾಜನಗರ ಜಿಲ್ಲೆಯಲ್ಲಿ ಕಂಡು ಬರುವ ಗುಂಡ್ಲುಪೇಟೆ ತಾಲೂಕಿನ ಶಾಸನಗಳಲ್ಲಿ ಇದರ ಬಗ್ಗೆ ಉಲ್ಲೇಖವಿದೆ. ಕ್ರಿ.ಶ. 1096ರ ಗುಂಡ್ಲುಪೇಟೆ ಕೋಟೆಯೊಳಗೆ ಬಸ್ತಿಮಾಳದಲ್ಲಿ ನೆಟ್ಟಿರುವ ಕಲ್ಲಿನ ಶಾಸನದಲ್ಲಿ ಹೊಯ್ಸಳ ಇಮ್ಮಡಿ ವೀರ ಬಲ್ಲಾಳನನ್ನು 'ಸಮ್ಯಕ್ತ್ವ ಚೂಡಾಮಣಿ' ಮಲೆ ಪೆರುಮಾಳಗೊಂಡ ಮೊದಲಾದ ಹೆಸರುಗಳಿಂದ ಕರೆಯಲಾಗಿದೆ. ಕೂಡುಗನಾಡ ಸಮಸ್ತ ಪ್ರಭು ಗಾವುಂಡರು ತುಪ್ಪೂರ ಬಿತ್ತಿ ಜಿನಾಲಯಕ್ಕೆ ಮಡಳ್ಳಿ ಗ್ರಾಮವನ್ನು ದತ್ತಿ ಬಿಟ್ಟ ವಿಚಾರವ್ನು ತಿಳಸುತ್ತದೆ. ವಜ್ರನಂದಿ ಸಿದ್ದಾಂತ ದೇವರ ಶಿಷ್ಯ ನಾಗಪಂಡಿತರ ಮಗ ಕನಕನಂದಿ ಪಂಡಿತ ಕಾಲು ತೊಳೆದು ಸಮಸ್ತ ಗೌಡರು ಜಿನಾಲಯದ ಜೀರ್ಣೋದ್ಧಾರ ದೇವರ ಅಷ್ಟವಿದ್ಯಾರ್ಚನೆಗಾಗಿ ಮತ್ತು ಮುನಿಗಳ ಆಹಾರ ಧಾನ್ಯಕ್ಕೆ ದತ್ತಿ ಕೊಟ್ಟಿದ್ದನ್ನು ಅನಂತ ದೇವರಿಗೆ ಕೆಲವು ಗೌಡ ಪ್ರಭುಗಳು ಕೊಟ್ಟ ದತ್ತಿಯನ್ನು ತಿಳಸುತ್ತದೆ.

ಗುಂಡ್ಲುಪೇಟೆಯ ಕ್ರಿ.ಶ. 1196ರ ಶಾಸನವೊಂದರಲ್ಲಿ ಹೊಯ್ಸಳ ವೀರಬಲ್ಲಾಳನನ್ನು ಸಮಸ್ಯಕ್ತ್ವ ಚೂಡಾಮಣಿ ಎಂದು ಕರೆಯಲಾಗಿದೆ. ಕುಡುಗುನಾಡ ಸಮಸ್ತ ಪ್ರಭುಗಾವುಂಡಗಳು ತುಪ್ಪೂರ ಬಿಟ್ಟಜಿನಾಲಯಕ್ಕೆ ಮಡಹಳ್ಳಿಯನ್ನು ದತ್ತಿ ಬಿಟ್ಟಿದ್ದಾರೆ. ವಜ್ರನಂದಿ ಸಿದ್ಧಾಂತ ದೇವರ ಶಿಷ್ಯ, ನಾಗಪಂಡಿತರ ಮಗ ಕನಕನಂದಿಪಂಡಿತರ ಕಾಲು ತೊಳೆದು ಸಮಸ್ತಗಾವುಂಡರು ಜಿನಾಲಯದ

ಜೀರ್ಣೋದ್ಧಾರ, ದೇವರ ಅಷ್ಟವಿಧಾರ್ಚನೆ ಮತ್ತು ಮುನಿಗಳ ಆಹಾರ ದಾನಕ್ಕೆ ದತ್ತಿಕೊಟ್ಟಿರುವುದನ್ನು ತಿಳಿಸುತ್ತದೆ. ಇದರ ಪಕ್ಕದಲ್ಲಿರುವ ಮತ್ತೊಂದು ಶಾಸನವು ಸಹ ವಿಜಯಪುರ ಅನಂತದೇವರಿಗೆ ಕೆಲವು ಗೌಡಪ್ರಜೆಗಳು ದತ್ತಿಯನ್ನು ನೀಡಿರುವುದನ್ನು ತಿಳಿಸುತ್ತದೆ. ಶಾಸನ ದೊರೆತಿರುವ ತುಪ್ಪೂರು ಗ್ರಾಮದಲ್ಲಿ ಯಾವುದೇ ಬಸದಿ ಕಂಡುಬರುವುದಿಲ್ಲ. ಬಹುಶಃ ಬಸದಿ ಸಂಪೂರ್ಣವಾಗಿ ನಾಶವಾಗಿರಬಹುದು.

ಕ್ರಿ.ಶ. 12ನೇ ಶತಮಾನದ ಕೆಲಸೂರಿನ ಶಾಸನದಲ್ಲಿ.... ಕಡಿಣ ನಿಮಿತ್ತವಾಗಿ ಕುಡುಗುನಾಡ ಕೆಲ್ಲಸೂರ ಸರ್ವಲೋಕಾಶ್ರಯದ ಬಸದಿಗೆ ಮುನ್ನ ಬಿಟ್ಟ ಭೂಮಿಗಂ........ ಎಂದು ಉಲ್ಲೇಖಿಸುತ್ತದೆ. ಇದೇ ತೇದಿಯ ಮತ್ತೊಂದು ಶಾಸನದಲ್ಲಿ ಆ ನಾಡಿನ ಗಾವುಂಡನಾದ ವಿಕ್ರಮ ಜೋಳ ಪೆರ್ಮಾನಡಿಯು ಕೆಲವು ದತ್ತಿ ಬಿಟ್ಟ ವಿಚಾರವನ್ನು ತಿಳಿಸುತ್ತದೆ. ಕ್ರಿ.ಶ.. 1229ರ ಕೆಲಸೂರು ಶಾಸನವು ಕೆಲವು ಭಕ್ತರು ದಾನ ಕೊಟ್ಟ ಸಂಗತಿಯನ್ನು ಪ್ರಸ್ತಾಪಿಸುತ್ತದೆ. ಇದೇ ಗ್ರಾಮದ ಮತ್ತೊಂದು ಶಾಸನವು ಕ್ರಿ.ಶ. 1829ಕ್ಕೆ ಸೇರಿದ್ದು, ಶಾಂತ ಪಂಡಿತನ ಮಗನ ವಿಜ್ಞಾಪನೆ ಮೇರೆಗೆ 3ನೇ ಕೃಷ್ಣರಾಜನು ಕೆಲಸೂರಿನ ಚೈತ್ಯಾಲಯದಲ್ಲಿ ಚಂದ್ರಗುಪ್ತ ಮತ್ತು ವಿಜಯ ಪಾರ್ಶ್ವನಾಥ ತೀರ್ಥಂಕರರ ಬಿಂಬಗಳನ್ನು ಹೊಸದಾಗಿ ಪ್ರತಿಷ್ಠಾಪಿಸಿ ಚೈತ್ಯಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿ ವಿಜಯ ಮತ್ತು ಜ್ವಾಲಿನಿ ದೇವಿಯ ವಿಗ್ರಹಗಳನ್ನು ನೂತನವಾಗಿ ಪ್ರತಿಷ್ಟೆ ಮಾಡಿಸಿದ ವಿಷಯಗಳನ್ನು ತಿಳಿಸುತ್ತದೆ. ಕ್ರಿ.ಶ. 14ನೇ ಶತಮಾನಕ್ಕೆ ಸೇರಿದ ತೆರಕಣಾಂಬಿಯ ಶಾಸನದಲ್ಲಿ ರಾಜಗುರು (ಮಂಡ) ರಳಾಚಾರ್ಯ ಖುಮಪ್ಪ (ಸಮ) ಯಾಭರಣ ಲಳಿತ ಕೀರ್ತಿ ಭಟ್ಟಾರಕರು ಮಾಡಿಸಿದ (ಪ್ರತಿಮೆ) ಮಂಗಳ ಮಹಾಶ್ರೀ ಶ್ರೀ ಶ್ರೀ ಎಂದು ತಿಳಿಸುತ್ತದೆ. ಕ್ರಿ.ಶ.10ನೇ ಶತಮಾನದ ಹಂಗಳದ ಶಾಸನದಲ್ಲಿ ಸರ್ವಲೋಕಾಶ್ರಯ ಬಸದಿಯು ಒಂದು ಕಾಲದಲ್ಲಿ ವೈಭವಯುತನಾಗಿ ಮೆರೆದಿದ್ದು ಶಾಸನಗಳ ಹಿನ್ನೆಲೆಯನ್ನು ಕಲಾ ವೈಭವವನ್ನು ನೆನಪಿಸುವ ಕಂಚಿನ ಪ್ರತಿಮೆ, ಗಿಂಡಿ, ಗಂಟೆ, ತಟ್ಟೆ ಮೊದಲಾದ ವಸ್ತುಗಳಲ್ಲಿ 18 ಪೂಜಾ ವಸ್ತುಗಳನ್ನು ತಿಳಿಸಲಾಗಿದ್ದು, ತೀರ್ಥಂಕರ ಹಿಂಬದಿಯ ಪಾದ ಪೀಠದಲ್ಲಿರುವ ಬರವಣಿಗೆಯಿಂದ ಚಿಕ್ಕ ಜೋಗಟ್ಟೆಯ ತಾಯಿ ತೀರ್ಥಂಕರ ಹಿಂಬದಿಯ ಪಾದ ಪೀಠದಲ್ಲಿರುವ ಬರವಣಿಗೆಯಿಂದ ಚಿಕ್ಕ ಜೋಗಟ್ಟೆಯ ತಾಯಿ ಮಾಂಕಬ್ಬೆ ಕಂತಿಯರು ಶ್ರೀಮದ್ದಾ ಮಾಣನಿ ಭಟ್ಟಾರಕರ ಶಿಷ್ಯ ಎಂದು ತಿಳಿಯುತ್ತದೆ. ಇದರಿಂದ ಮಿಕ್ಕ ವಸ್ತುಗಳ ಮೇಲೆ ಸರ್ವಲೋಕಾತ್ರಯದ ಮೇಲೆ ಜೋಕಬ್ಬೆಯ ಹೆಸರುಗಳಿವೆ. ಅಂದರೆ ಆ ಕಾಲದಲ್ಲಿ ಈ ಪ್ರಾಂತ್ಯದಲ್ಲಿ ಜೋಕಬ್ಬೆ ಜೈನ ಧಾರ್ಮಿಕ ಮಹಿಳೆಯಾಗಿದ್ದಳೆಂದು ಈ ಶಾಸನಗಳಿಂದ ವ್ಯಕ್ತವಾಗುತ್ತದೆ. ಕ್ರಿ.ಶ. 10 ಮತ್ತು 11ನೇ ಶತಮಾನದ ಗುಂಡ್ಲುಪೇಟೆಯ ಅನಂತನಾಥ ಬಸದಿ ಪೂರ್ಣವಾಗಿ ನಾಶವಾಗಿದ್ದು ಈ ಸ್ಥಳದ ಕುರುಹಾಗಿ ಬಸದಿ ಮಾಳ ಇಂದು ಉಳಿದಿದೆ. ಗುಂಡ್ಲುಪೇಟೆಯ ಹಂಗಳದ ಚಿಕ್ಕ ಜೋಗಬ್ಬೆಯ ಶಾಸನ ಮತ್ತು 24ನೇ ತೀರ್ಥಂಕರರ ವಿಗ್ರಹ ಅತ್ಯಂತ ಪ್ರಸಿದ್ಧವಾದುದ್ದು. ತೆರಕಣಾಂಬಿ ಪ್ರವಾಸಿ ಮಂದಿರದ ಬಳಿಯಲ್ಲಿನ ಪಾರ್ಶ್ವನಾಥ ವಿಗ್ರಹ ಪೀಠದ ಮೇಲಿರುವ 14ನೆಯ ಶತಮಾನದ ಶಾಸನದಲ್ಲಿ ಮೂಲಸಂಘ, ದೇಶಿಯಗಣ, ಪೊಸ್ತಕಗಚ್ಛ, ಕುಂದಕುಂದಾನ್ವಯ

ಹನಸೋಗೆಯ ಬಳಿಯ ರಾಜಗುರು ಮಂಡಳಾಚಾರ್ಯರು ಸಮಯಾಭರಣ ಲಲಿತಕೀರ್ತಿ ಭಟಾಕರು ಮಾಡಿಸಿದ ಪ್ರತಿಮೆಯ ಉಲ್ಲೇಖವಿದೆ. ಹಂಗಳದ ಭೂಮಿಯಲ್ಲಿ ದೊರೆತ ಚೌವೀಸ ತೀರ್ಥಂಕರ ಲೋಹಬಿಂಬದ ಪೀಠದಲ್ಲಿ ಸರ್ವಲೋಕಾಶ್ರಯದ ಪ್ರಿಯಾಭಾರ್ಯ್ಯಾ ಚಿಕ್ಕಜೋಗಬ್ಬೆಯ ತಾಯಿ ಮಾಂಕಬ್ಬೆ ಕಂತಿಯರು ದಾಮನಂದಿ ಭಟ್ಟಾರಕರ ಸಿಸಿತ್ತಿಯರು ಎಂದು ಉಲ್ಲೇಖಿಸಿರುವ ಶಾಸನದ ಜೊತೆ ಅದೇ ಹಂಗಳದ ಗ್ರಾಮದಲ್ಲಿ ದೊರೆತ ಎರಡು ಶಾಸನಗಳಲ್ಲಿ ಒಂದರಲ್ಲಿ ನಾಲ್ಕು ದೀಪಸ್ತಂಭ ಮತ್ತು ಘಂಟೆಯ ಮೇಲೆ 'ದಾಮನಂದಿ ಭಟ್ಟಾರಕರ ಗುಡ್ಡಿ ಚಿಕ್ಕಜೋಗಬ್ಬೆ' ಎಂದು ಮತ್ತೊಂದರಲ್ಲಿ 'ಚಿಕ್ಕಜೋಗಬ್ಬೆ' ಎಂಬ ಒಂದು ಪದ ಮಾತ್ರ ಉಲ್ಲೇಖವಾಗಿದೆ. ರಾಮೇಶ್ವರ ದೇವಸ್ಥಾನದ 14ನೆಯ ಶತಮಾನದ ಶಾಸನದಲ್ಲಿ 'ಪ್ರಸಿದ್ಧರಾಸಿ ಸಂಕೀರ್ತ್ತಿಯತಿ ನೀಲಕಂಠಾರ್ಯ್ಯಂತ ಶ್ರೇಷ್ಠ ಚಂದ್ರಮೌಳಿಕ್ರಿಪೋದ್ಭವ ತತ್ರಿಪೋದ್ಭವ ಆಚಾರ್ಯ ವಿದ್ಯಾರಾಸಿ ದಿಗಂಬರ' ಎಂಬ ಮುನಿಗಳ ಹೆಸರು ಉಲ್ಲೇಖವಾಗಿದೆ. ಬೇರಂಬಾಡಿ ಮಾರಿಗುಡಿಯ ಬಳಿಯಲ್ಲಿರುವ ಶಾಸನದಲ್ಲಿ 'ಓಂ ನಮೋ ಅರ್ಹತೇ ಭಗವತೇ ಚಂಡೋಗ್ರಪಾರರ್ಶ್ವನಾಥಾಯ ಧರಣೇಂದ್ರ ಪದ್ಮಾವತಿ ಸಹಿತಾಯ ಸರ್ವವ್ಯಾಧಿಹರಂ ಪಂಚಪರಮೇಷ್ಟಪಾದ' ... ಎಂದಿದೆ.

ಕೆಲಸೂರು ಬಸದಿಯಲ್ಲಿರುವ ಕ್ರಿ.ಶ. 1229ರ ಶಾಸನವು ಇಮ್ಮಡಿ ವೀರನರಸಿಂಹನ ಆಳ್ವಿಕೆಯ ಕಾಲದಲ್ಲಿ ಹಿರಿಯನಾಡ ಮಹಾಪ್ರಭು ಕೊಲ್ಲಣದ ಶಂಕರ .... ಗೋಪಯ್ಯ, ರಂಗಣ್ಣ ಇವರುಗಳು ಕುಡುಗುನಾಡ ಕೆಲಸೂರು ಜೈನ ಬಸದಿಯ ಶ್ರೀಕಾರ್ಯಕ್ಕೆ 'ನಿಬಂಧಿಯುವಂ ಮಂನೆಯಮುವಂ' ದಾನವಾಗಿ ಬಿಟ್ಟು ನೆರವಾದ ಬಗ್ಗೆ ತಿಳಿಸಿದೆ. ಬಹಳಷ್ಟು ತ್ರುಟಿತವಾಗಿರುವ 14ನೆಯ ಶತಮಾನಕ್ಕೆ ಸೇರಿದ ಕೆಲಸೂರಿನ ಬಸದಿಯ ತಳಪಾದಿ ಕಲ್ಲಿನ ಮೇಲಿರುವ ತಮಿಳು ಗ್ರಂಥಾಕ್ಷರದಲ್ಲಿರುವ ತಮಿಳು ಭಾಷೆಯ ಶಾಸನವು ಕೆಲಸೂರಿನಲ್ಲಿರುವ ಜೈನ ದೇವಾಲಯಕ್ಕೆ 12 ಖಂಡುಗ ಬೆಲೆ ಬೆಳೆಯುವ ಭೂಮಿಯನ್ನು ವಿಕ್ರಮಚೋಳಪೆರುಮಾಡಿ ಗಾವುಂಡನು ದಾನ ನೀಡಿರುವುದನ್ನು ಮತ್ತು ರಾಜಾಚಾರಿಯ ಮಗ ಮಾಣಿಕ್ಕಾಚಾರಿ ಕೆತ್ತಿದಂತೆ ಉಲ್ಲೇಖಿಸಿದೆ. ಬಹಳಷ್ಟು ತ್ರುಟಿತವಾಗಿರುವ 12ನೆಯ ಶತಮಾನಕ್ಕೆ ಸೇರಿದ ಮತ್ತೊಂದು ಶಾಸನ '. . . ಕ್ರಮಣ ನಿಮಿತ್ತವಾಗಿ ಕುಡುಗನಾಡ ಕೆಲ್ಲಸೂರ ಸರ್ವಲೋಕಾಶ್ರೇಯಬಸದಿಗೆ ಹಿಂದೆ ದಾನ ನೀಡಿದ ವಿಷಯವನ್ನು ಮತ್ತು ಕೆಲ್ಲಸೂರ ಗಾಣದೆಣ್ಣೆಯನು ಸರ್ವನಮಸ್ಯವಾಗಿ ಧಾರಾಪೂರ್ವಕವಾಗಿ ಬಿಟ್ಟ ದತ್ತಿ' ಎಂದು ಉಲ್ಲೇಖಿಸಿದೆ. ಕೆಲಸೂರು ಬಸದಿಯಲ್ಲಿರುವ ಕ್ರಿ.ಶ. 1828ರ ಶಾಸನದಲ್ಲಿ ಮೈಸೂರು ಅರಸ ಚಾಮರಾಜರ ಮಗ ಮುಮ್ಮಡಿ ಕೃಷ್ಣರಾಜರು ಚಂದ್ರಪ್ರಭಾ ತೀರ್ಥಂಕರ, ವಿಜಯದೇವರ ಮತ್ತು ಜ್ವಾಲಿನಿದೇವತೆಯ ಹೊಸ ಪ್ರತಿಮೆಗಳನ್ನು ಮಾಡಿಸಿ ಕೊಟ್ಟು, ಚೈತ್ಯಾಲಯಕ್ಕೆ ಹೊಸದಾಗಿ ಬಣ್ಣವನ್ನು ಮಾಡಿಸಿದ ಉಲ್ಲೇಖವಿದೆ. ಬಹುಶಃ ಪ್ರತಿಮೆಗಳು ಹಾಳಾಗಿದ್ದು ಅವುಗಳನ್ನು ಹೊಸದಾಗಿ ಮಾಡಿಸಿರಬಹುದು. ಕ್ರಿ.ಶ. 1829ರ ಕೆಲಸೂರು ಶಾಸನವು ಮುಮ್ಮಡಿ ಕೃಷ್ಣರಾಜ ಒಡೆಯರು ಕೆಲಸೂರಿನ ಸರ್ವಾಲೋಕಾಶ್ರಯ ಬಸದಿಯ

ಜೀರ್ಣೋದ್ಧಾರ ಮಾಡಿಸಿ, ವಿಜಯ ಮತ್ತು ಜ್ವಾಲಾಮಾಲಿನಿಯ ಪ್ರತಿಷ್ಠಾಪನೆ ಮಾಡಿಸಿರುವುದು ಉಲ್ಲೇಖಗೊಂಡಿದೆ. ಗುಂಡ್ಲುಪೇಟೆ ತಾಲ್ಲೂಕಿನ ರಾಘವಪುರದ ಕ್ರಿ.ಶ. 1320ರ ಶಾಸನವು ಜೈನ ಶಾಸನವಲ್ಲದಿದ್ದರೂ ಜೈನಧರ್ಮದ ಸ್ಥಿತಿಗತಿಯ ಪರಿಶೀಲನೆಗೆ ನೆರವಾಗಿದೆ. ಈ ಶಾಸನ ಹೊಯ್ಸಳ ಮುಮ್ಮಡಿ ವೀರಬಲ್ಲಾಳನ ಕಾಲಕ್ಕೆ ಸೇರಿದುದಾಗಿದೆ. ಇದರಲ್ಲಿ ಕೇತಯ ದಂಡನಾಯಕನು ದೊರೆಯಿಂದ ಗುಮ್ಮಟಹಳ್ಳಿ ಮತ್ತು ಮಾಡ್ರಹಳ್ಳಿಗಳನ್ನು ಪಡೆದುಕೊಂಡು ತನ್ನ ಬಳಿ ಶ್ರೀಕರಣನಾಗಿದ್ದ ನಾರಣ ದೇವಣ್ಣನಿಗೆ ದತ್ತಿಕೊಟ್ಟನು. ಇವೆರಡು ಹಳ್ಳಿಗಳು ಅಗ್ರಹಾರವಾಗಿ ಪರಿವರ್ತಿತವಾದವು. ಗೊಮ್ಮಟಹಳ್ಳಿಗೆ ನಾರಣದೇವಣ್ಣನ ತಂದೆ ರಾಘವಾದೇವನ ಹೆಸರಿನಲ್ಲಿ ರಾಘವಪುರ ಎಂದು ಹೆಸರಾಯಿತು. ಕೆಲಸೂರಿನಲ್ಲಿ ಪಾರ್ಶ್ವನಾಥ ಬಸದಿಯೊಂದಿದೆ. ಇಲ್ಲಿ ನಾಲ್ಕು ಶಾಸನಗಳಿವೆ. ಬಸದಿಯ ಉತ್ತರ ಭಾಗದಲ್ಲಿರುವ ಶಾಸನದಲ್ಲಿ ಆ ಬಸದಿಯನ್ನು ಸರ್ವಲೋಕಾಶ್ರಯ ಎಂದು ಕರೆದಿದೆ. ತಮಿಳಿನ ಶಾಸನದಲ್ಲಿ ಆ ನಾಡಿನ ಗಾವುಂಡನಾದ ವಿಕ್ರಮಚೋಳ ಪೆರ್ಮಾಡಿಯು ಕೆಲವು ದತ್ತಿ ಬಿಟ್ಟಿರುವುದನ್ನು ತಿಳಿಸುತ್ತದೆ. ಪಶ್ಚಿಮ ದಿಕ್ಕಿನ ಶಾಸನ ಕೆಲವು ಭಕ್ತರು ಬಸದಿಗೆ ಬಿಟ್ಟ ದತ್ತಿಯನ್ನು ತಿಳಿಸುತ್ತದೆ. ಬಸದಿಯ ಗೋಡೆಯ ಮೇಲಿರುವ 1829ರ ಶಾಸನದಲ್ಲಿ ಶಾಂತಪಂಡಿತನ ಮಗನ ವಿಜ್ಞಾಪನೆಯ ಮೇರೆಗೆ ಮುಮ್ಮಡಿ ಕೃಷ್ಣರಾಜ ಒಡೆಯರು ಕೆಲಸೂರಿನ ಚೈತ್ಯಾಲಯಕ್ಕೆ ಚಂದ್ರಪ್ರಭ ಮತ್ತು ವಿಜಯ ಪಾರ್ಶ್ವನಾಥ ತೀರ್ಥಂಕರರ ಮತ್ತು ಜ್ವಾಲಿನಿದೇವಿಯ ಶಿಲ್ಪಗಳನ್ನು ಪ್ರತಿಷ್ಠಾಪಿಸಿ ಬಸದಿಯನ್ನು ಜೀರ್ಣೋದ್ಧಾರ ಮಾಡಿದ್ದಾರೆ. ಬಸದಿಯು ಗರ್ಭಗೃಹ, ಅರ್ಧಮಂಟಪ ನವರಂಗವನ್ನು ಹೊಂದಿದೆ. ಈ ಬಸದಿಯು ಸಂಪೂರ್ಣವಾಗಿ ಜೀರ್ಣೋದ್ಧಾರವಾಗಿದೆ. ಇಲ್ಲಿ ನಿಶಿದಿ ಕಲ್ಲುಗಳಿವೆ. ಬಸದಿಯು ಚೆನ್ನಾಗಿದೆ.

ತೆರಕಣಾಂಬಿಯ ಪ್ರವಾಸಿ ಮಂದಿರದ ಬಳಿ ಬಿದ್ದಿದ್ದ ಪಾರ್ಶ್ವನಾಥ ವಿಗ್ರಹದ ಪೀಠದ ಮೇಲೆ ರಾಜಗುರು ಮಂಡಲಾಚಾರ್ಯರಾದ ಸಮಯಾಭರಣ ಲಲಿತಕೀರ್ತಿ ಭಟಾರರು ಮಾಡಿಸಿದ ಪ್ರತಿಮೆ ಎಂಬ ಬರಹವಿದೆ. ಇದು ಕ್ರಿ.ಶ. 14ನೆಯ ಶತಮಾನದ ಬರಹವಾಗಿದೆ. ಪ್ರಸ್ತುತ ತೆರಕಣಾಂಬಿಯಲ್ಲಿ ಪಾರ್ಶ್ವನಾಥ ಬಸದಿಯಿಲ್ಲ. ಆದರೆ ಪಾರ್ಶ್ವನಾಥನ ವಿಗ್ರಹ ಸಂತೇಮಾಳದಲ್ಲಿ ಅನಾಥವಾಗಿ ನಿಂತಿದೆ. ಇದೇ ಬಸದಿಯಲ್ಲಿದ್ದ ಪದ್ಮಾವತಿ ಯಕ್ಷಿಯ ವಿಗ್ರಹವನ್ನು ಚಾಮರಾಜನಗರದ ಬಸದಿಗೆ ಸಾಗಿಸುವುದಾಗಿ ತಿಳಿದುಬರುತ್ತದೆ. ಮೇಲಿನ ಶಾಸನಗಳಿಂದ ಈ ಪ್ರದೇಶದಲ್ಲಿ ಜೈನರು ಸಾಕಷ್ಟು ಸಂಖ್ಯೆಯಲ್ಲಿದ್ದಿರ ಬಹುದೆಂದು ತಿಳಿಯಬಹುದು. ರಾಜರು, ಶ್ರೀಮಂತರು ಬಸದಿಗಳಿಗೆ ದಾನ ದತ್ತಿಗಳನ್ನು ಕೊಟ್ಟು ಪ್ರೋತ್ಸಾಹಿಸುತ್ತಿದ್ದ ವಿಚಾರವನ್ನು ಎಲ್ಲ ಶಾಸನಗಳು ಹೇಳುತ್ತವೆ. ಮುನಿಗಳು, ಕಂತಿಯರು ಬಸದಿಗಳಲ್ಲಿದ್ದು ಮರಣಕಾಲದಲ್ಲಿ ಸಲ್ಲೇಖನ ವ್ರತ ಸ್ವೀಕರಿಸಿ ಮುಡಿಪುತ್ತಿದ್ದರು. ಅವರ ಸ್ಮಾರಕವಾಗಿ ನಿಸಿದಿಗೆ ಪಾದುಕೆಗಳನ್ನು ನಿರ್ಮಿಸಲಾಗುತ್ತಿತ್ತು. ಮುನಿಗಳು ಬೇರೆ ಬೇರೆ ಗಣಗಳಿಗೆ ಸೇರಿದವರಾಗಿರು. ಉದಾ : ದ್ರವಿಡಾನ್ವಯ, ಕೊಂಡಕುಂದಾನ್ವಯ, ಮೂಲಸಂಘ, ದೇಸಿಗಣ, ಪುಸ್ತಕಗಚ್ಛ ಇತ್ಯಾದಿ. ಗಾವುಂಡ ಮುಂತಾದ ಗ್ರಾಮ ಪ್ರಮುಖರು ಬಸದಿಗಳಿಗೆ ಕೆಲವು ತೆರಿಗೆಗಳನ್ನು ಮನ್ನಾ ಮಾಡುವ

ಮೂಲಕ ತೆರಿಗೆಗಳಿಂದ ವಿನಾಯಿತಿ ನೀಡುತ್ತಿದ್ದರು. ಬಸದಿಗಳಿಗೆ ದಾನ ನೀಡುವುದರಲ್ಲಿ ಸ್ತ್ರೀಯರು ಮುಂದಾಗಿದ್ದರು. ಚಿಕ್ಕತಾಯಿ, ಚಿಕ್ಕ ಜೋಗಬ್ಬೆರನ್ನು ಹೆಸರಿಸಬಹುದು. ಊರಿನಲ್ಲಿದ್ದ ಇತರ ಧರ್ಮೀಯರೂ ಬಸದಿಗಳ ಜೀರ್ಣೋದ್ಧಾರ ಕಾರ್ಯದಲ್ಲಿ ನೆರವಾಗಿರುತ್ತಿದ್ದರು. ಒಟ್ಟಾರೆ ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಗುಂಡ್ಲುಪೇಟೆ ತಾಲೂಕಿನಲ್ಲಿ ಜೈನ ಧರ್ಮವು ಗಂಗರ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದು ಇಂದಿಗೂ ಜೈನ ಧರ್ಮದ ಅಂದಿನ ವೈಭವನ್ನು ಸಾರುವ ಕುರುಹುಗಳು ಶಾಸನದಲ್ಲಿ ಕಂಡು ಬಂದಿರುವುದು ಗಮನಾರ್ಹ ಸಂಗತಿಯಾಗಿದೆ.

ಈ ಮೇಲೆ ತಿಳಿಸಿದ ಎಲ್ಲಾ ಅಂಶಗಳನ್ನು ಗಮನಿಸಿದಾಗ ಗುಂಡ್ಲುಪೇಟೆ ತಾಲೂಕಿನಲ್ಲಿ ಧಾರ್ಮಿಕವಾಗಿ ಜೈನ, ವೈಷ್ಣವ, ಶೈವ ಮತ್ತು ವೀರ ಶೈವ, ಧರ್ಮಗಳು ತಮ್ಮದೇ ಆದ ಪ್ರಾಬಲ್ಯವನ್ನು ಹೊಂದಿ ಅರಸರ ಆಳ್ವಿಕೆಯ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಅಂಶಗಳನ್ನು ಧಾರ್ಮಿಕವಾಗಿ ಹೊರ ಚೆಲ್ಲುವಲ್ಲಿ ತಮ್ಮದೇ ಪಾತ್ರವನ್ನು ವಹಿಸಿವೆ ಎಂದು ಹೇಳಬಹುದು.

## ಪರಾಮರ್ಶನ ಗ್ರಂಥಗಳು


1. ಅಂಬಳಿಕೆ ಹಿರಿಯಣ್ಣ– ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈವಿವಿ, ಮೈಸೂರು,2009
2. ಮಂಜುನಾಥನ್, ಜಿ.ಜಿ., (ಸಂ). ವನಶ್ರೀ, ಗುಂಡ್ಲುಪೇಟೆ ತಾಲೂಕು ಅಭಿವೃದ್ಧಿ ಮಂಡಳಿ, ಮೈಸೂರು, 1982.
3. ಮಲೆಯೂರು ಗುರುಸ್ವಾಮಿ, (ಪ್ರ.ಸಂ.), ಸೋಮಶೇಖರ ಬಿಸಲ್ವಾಡಿ (ಸಂ), ಹೊನ್ನುಹೊಳೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಚಾಮರಾಜನಗರ, 2007.
4. ರಾಮಕೃಷ್ಣ,ಆರ್.,ಗುಂಡ್ಲುಪೇಟೆ ತಾಲೂಕು ದರ್ಶನ,ಎಬಿಎಚ್ ಪ್ರಕಾಶನ, ಬೆಂಗಳೂರು, 1984.
5. ಕಲಬುರ್ಗಿ, ಎಂ.ಎಂ.– ಶಾಸನಗಳಲ್ಲಿ ಶಿವಶರಣರು, ಸಿರಿಗನ್ನಡ ಪ್ರಕಾಶನ, ಧಾರವಾಡ,1970
6. ಕೃಷ್ಣರಾವ್, ಎಂ.ಎಚ್., ಮತ್ತು ಕೇಶವ ಭಟ್ಟ– ಕರ್ನಾಟಕ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು,1970
7. ದಿವಾಕರ್, ಆರ್. ಆರ್.– ಕರ್ನಾಟಕದ ಪರಂಪರೆ, ಸಂಪುಟ–1, 2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು,1992
8. ಎಪಿಗ್ರಾಫಿಯ ಕರ್ನಾಟಿಕ ಸಂಪುಟ–3